ಪಟ್ಟಣ ಸಹಕಾರ



# ಬ್ಯಾಂಕಿಂಗ್ ಪ್ರಪಂಚ

ಪಟ್ಟಣ ಸಹಕಾರ ಬ್ಯಾಂಕುಗಳ ತ್ರೈಮಾಸಿಕ

ಸಂಪುಟ : 14
ಸಂಚಿಕೆ : 3
ಜುಲೈ / ಆಗಸ್ಟ್ / ಸೆಪ್ಟೆಂಬರ್ 2026
ಪುಟಗಳು : 44



ನೂತನ ಸಹಕಾರ ಸಚಿವರಾಗಿ

**ಲಕ್ಷ್ಮಣ ಸವದಿ**




## ರಿಸರ್ವ್ ಬ್ಯಾಂಕಿನ ನೇರ ಹೊಣೆಗಾರಿಕೆಯ ಡಿಜಿಟಲ್ ರೂಪಾಯಿ ಚಲಾವಣೆಗೆ ಸುರಕ್ಷಿತ ಹಾಗೂ ಸುಲಭ

## 2026ರಲ್ಲಿ ಕರ್ನಾಟಕದ ಆರ್ಥಿಕತೆ : ಅಭಿವೃದ್ಧಿಯ ಹೊಸ ಎತ್ತರದತ್ತ ದಿಟ್ಟ ಹೆಜ್ಜೆ







ಸರ್ ಎಂ. ವಿಶ್ವೇಶ್ವರಯ್ಯ ಸಹಕಾರ ಬ್ಯಾಂಕ ನಿ., ಕಲಬುರಗಿ ಬ್ಯಾಂಕು ನಡೆದುಬಂದ ದಾರಿ




ದಿ ಮೈಸೂರು ಮರ್ಚೆಂಟ್ಸ್ ಕೋ–ಆಪರೇಟಿವ್ ಬ್ಯಾಂಕ್ ಲಿ., ಮೈಸೂರು – ಯಶೋಗಾಥೆ




ಚಾರ್ಟರ್ಡ್ ಸಹಕಾರಿ ಬ್ಯಾಂಕ್ ನಿ., ಸಂಸ್ಥೆಯ ಹುಟ್ಟು ಮತ್ತು ಬೆಳವಣಿಗೆ ಮತ್ತು ನಡೆದು ಬಂದ ದಾರಿ



ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳವು ರಾಜ್ಯದ ಪಟ್ಟಣ ಸಹಕಾರ ಬ್ಯಾಂಕುಗಳ ಅಧ್ಯಕ್ಷರು / ಉಪಾಧ್ಯಕ್ಷರು ಮತ್ತು ಆಡಳಿತ ಮಂಡಳಿ ನಿರ್ದೇಶಕರುಗಳಿಗೆ ದಿನಾಂಕ:07.07.2026ರಂದು ಮೈಸೂರಿನ ದಿ ಪ್ರೆಸಿಡೆಂಟ್ ಹೋಟೆಲ್‌ನಲ್ಲಿ ಏರ್ಪಡಿಸಿದ್ದ ರಾಜ್ಯಮಟ್ಟದ ಒಂದು ದಿನದ ವಿಚಾರ ಸಂಕಿರಣವನ್ನು ಮಹಾಮಂಡಳದ ನಿರ್ದೇಶಕರಾದ ಶ್ರೀ ಎಸ್.ಬಿ.ಎಂ. ಮಂಜುರವರು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಮಹಾಮಂಡಳದ ನಿರ್ದೇಶಕರುಗಳಾದ ಶ್ರೀ ಎಸ್.ಪಿ. ಶೇಷಾದ್ರಿ, ಶ್ರೀ ಎಂ.ಎಂ. ಮೆಟಗುಡ್ಡ, ಶ್ರೀ ಎಂ.ಆರ್.ವೆಂಕಟೇಶ್, ಮಹಾಮಂಡಳದ ವಿಶೇಷ ಆಹ್ವಾನಿತರಾದ ಶ್ರೀ ಎಣ್ಣೆಗೆರೆ ಆರ್. ವೆಂಕಟರಾಮಯ್ಯ, ಶಿಕ್ಷಣ ನಿಧಿ ಸಲಹಾ ಸಮಿತಿ ಸದಸ್ಯರಾದ ಶ್ರೀ ಅಂಬೋರೆ ಪಿ. ಸತೀಶ್, ಮಹಾಮಂಡಳದ ಮಾಜಿ ನಿರ್ದೇಶಕರುಗಳಾದ ಡಾ.ಎಂ.ವಿ. ಬೃಹದಾಂಬ, ಶ್ರೀ ವಿಜಯಕುಮಾರ ಸಿ. ಅಂಗಡಿ, ಶ್ರೀ ಪಿ. ಜನಾರ್ಧನ, ಶ್ರೀ ಕೋದಂಡರಾಮ ಬಿ, ಮಾಜಿ ವಿಶೇಷ ಆಹ್ವಾನಿತರಾದ ಶ್ರೀ ವಿಜಯಾನಂದ ಬ. ಹೊಸಕೋಟಿ, ಮಹಾಮಂಡಳದ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಪುಂಡಲೀಕ ಎನ್. ಕೇರೂರೆ, ಉಪಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಅನಿಲ ಎಚ್. ಕಿರೇಸೂರ ರವರುಗಳು ಉಪಸ್ಥಿತರಿದ್ದರು.




ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳವು ರಾಜ್ಯದ ಪಟ್ಟಣ ಸಹಕಾರ ಬ್ಯಾಂಕುಗಳ ಅಧ್ಯಕ್ಷರು / ಉಪಾಧ್ಯಕ್ಷರು ಹಾಗೂ ನಿರ್ದೇಶಕ ಮಂಡಳಿ ಸದಸ್ಯರುಗಳಿಗೆ ದಿನಾಂಕ:20.08.2026ರಂದು ಉಡುಪಿಯ ಎಲ್.ಐ.ಸಿ. ಎಂಪ್ಲಾಯಿಸ್ ಕೋ–ಆಪರೇಟಿವ್ ಬ್ಯಾಂಕಿನ ಸಭಾಂಗಣದಲ್ಲಿ ಏರ್ಪಡಿಸಿದ್ದ ರಾಜ್ಯಮಟ್ಟದ ಒಂದು ದಿನದ ವಿಚಾರ ಸಂಕಿರಣವನ್ನು ಮಹಾಮಂಡಳದ ನಿರ್ದೇಶಕರಾದ ಶ್ರೀ ಎಚ್. ಜಯಪ್ರಕಾಶ್ ಕೆದ್ಲಾಯರವರು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಮಹಾಮಂಡಳದ ನಿರ್ದೇಶಕರಾದ ಶ್ರೀಮತಿ ಬನಶಂಕರಿ ಹೆಚ್.ಆರ್. ಮಹಾಮಂಡಳದ ಶಿಕ್ಷಣ ನಿಧಿ ಸಲಹಾ ಸಮಿತಿ ಸದಸ್ಯರುಗಳಾದ ಶ್ರೀ ಶಿವಕುಮಾರ ಗುಂದಗಿ, ಶ್ರೀ ಅಂಬೋರೆ ಪಿ. ಸತೀಶ್, ಎಲ್.ಐ.ಸಿ ಎಂಪ್ಲಾಯಿಸ್ ಕೋ–ಆಪರೇಟಿವ್ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಕೆ. ಕೃಷ್ಣ, ಟೀಚರ್ಸ್ ಕೋ–ಆಪ್ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಕೆ. ದಿನಕರ ಶೆಟ್ಟಿ, ನಾರಾಯಣ ಗುರು ಅರ್ಬನ್ ಸಹಕಾರ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಹರಿಶ್ಚಂದ್ರ ಅಮೀನ್, ಮಹಾಲಕ್ಷ್ಮಿ ಕೋ–ಆಪರೇಟಿವ್ ಬ್ಯಾಂಕಿನ ನಿರ್ದೇಶಕರಾದ ಶ್ರೀ ಮಂಜುನಾಥ ಎಸ್.ಕೆ., ಭಟ್ಕಳ ಅರ್ಬನ್ ಕೋ–ಆಪರೇಟಿವ್ ಬ್ಯಾಂಕಿನ ಅಧ್ಯಕ್ಷರಾದ ಶ್ರೀಮತಿ ಮೆಹಬೂಬಿ ಪಟೇಲ್ ಹಾಗೂ ಮಹಾಮಂಡಳದ ಮಾಜಿ ನಿರ್ದೇಶಕರು ಅಂಕೋಲಾ ಅರ್ಬನ್ ಸಹಕಾರ ಬ್ಯಾಂಕಿನ ಅಧ್ಯಕ್ಷರಾದ ಶ್ರೀ ರಾಜೇಂದ್ರ ಶಾಂಭ ಶೆಟ್ಟಿ, ಮಹಾಮಂಡಳದ ಉಪಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಅನಿಲ ಎಚ್. ಕಿರೇಸೂರ ರವರುಗಳು ಉಪಸ್ಥಿತರಿದ್ದರು.



ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳ ಮತ್ತು ಪ್ರಾದೇಶಿಕ ಸಹಕಾರ ನಿರ್ವಹಣಾ ಸಂಸ್ಥೆ (ಆರ್.ಐ.ಸಿ.ಎಂ)ಯ ಜಂಟಿ ಸಹಯೋಗದೊಂದಿಗೆ ಪಟ್ಟಣ ಸಹಕಾರ ಬ್ಯಾಂಕುಗಳಲ್ಲಿ ಹೊಸದಾಗಿ ನೇಮಕಗೊಂಡ ಸಿಬ್ಬಂದಿ ಮತ್ತು ಅಧಿಕಾರಿಗಳಿಗೆ ಐದು ದಿನಗಳ ನಿರ್ವಹಣಾ ಅಭಿವೃದ್ಧಿ ತರಬೇತಿ (Management Development Programme) ಶಿಬಿರವನ್ನು ಮಹಾಮಂಡಳದ ಉಪಾಧ್ಯಕ್ಷರಾದ ಶ್ರೀ ಬಿ.ಎಸ್. ಪರಮಶಿವಯ್ಯನವರು ಉದ್ಘಾಟಿಸಿದರು. ಈ ಸಂದರ್ಭದಲ್ಲಿ ಮಹಾಮಂಡಳದ ನಿರ್ದೇಶಕರಾದ ಶ್ರೀ ಎಮ್.ಆರ್. ವೆಂಕಟೇಶ್, ವಿಶೇಷ ಆಹ್ವಾನಿತರಾದ ಶ್ರೀ ಎಣ್ಣೆಗೆರೆ ಆರ್. ವೆಂಕಟರಾಮಯ್ಯ, ಪ್ರಾದೇಶಿಕ ಸಹಕಾರ ನಿರ್ವಹಣಾ ಸಂಸ್ಥೆಯ ಶ್ರೀ ಪಿ.ಎನ್. ಸುರೇಶ್ ಹಾಗೂ ಮಹಾಮಂಡಳದ ಮುಖ್ಯಕಾರ್ಯನಿರ್ವಹಣಾಧಿಕಾರಿ ಶ್ರೀ ಪುಂಡಲೀಕ ಎನ್. ಕೇರೂರೆ, ಪ್ರಭಾರ ಅಧೀಕ್ಷಕ ಶ್ರೀ ಆರ್.ಎಚ್. ಕುಮಾರ್ ರವರುಗಳು ಉಪಸ್ಥಿತರಿದ್ದರು.

## ಸಂಪಾದಕೀಯ



ಆತ್ಮೀಯ ಸಹಕಾರಿ ಬಂಧುಗಳೇ...

▸▸ ಎಚ್.ಕೆ. ಪಾಟೀಲ

# ಸಿಬ್ಬಂದಿಗಳಿಗೆ ಶಿಕ್ಷಣ- ತರಬೇತಿ ಹಾಗೆಯೇ ಸಂಸ್ಥೆಗಳಲ್ಲಿ ಪಾರದರ್ಶಕತೆ

**ಸಂಸ್ಥೆಯ ನಿತ್ಯದ ವ್ಯವಹಾರದಲ್ಲಿ ಪಾರದರ್ಶಕತೆ ರೂಪಿಸುವುದು ಕೂಡ ಅಗತ್ಯ. ಭದ್ರ ತಳಹದಿಯ ಮೇಲೆ ರೂಪುಗೊಳ್ಳುವ ಮೌಲ್ಯಾಧಾರಿತ ಪಾರದರ್ಶಕತೆಯಿಂದಾಗಿ ಸಂಸ್ಥೆಯೂ ಪ್ರಗತಿಯತ್ತ ದಾಪುಗಾಲು ಹಾಕಲು ಸಾಧ್ಯ. ಸಂಸ್ಥೆಗಳು ತಾವು ತೆಗೆದುಕೊಳ್ಳಬಹುದಾದ ನೀತಿ–ನಿರ್ಧಾರಗಳ ಮತ್ತು ಅದರ ಕಾರ್ಯವಿಧಾನಗಳ ಬಗ್ಗೆ ಗ್ರಾಹಕರಿಗೆ ಸ್ಪಷ್ಟವಾದ ಮಾಹಿತಿ ರವಾನೆ ಮಾಡುವುದು ಈ ಪಾರದರ್ಶಕತೆಯ ಮೊದಲ ಹೆಜ್ಜೆ. ಪಾರದರ್ಶಕತೆಯಿಂದ ವ್ಯವಹಾರದ ಗುಣಮಟ್ಟವನ್ನು ಹೆಚ್ಚಿಸಬಹುದು. ಹಾಗೆಯೇ, ಯಾವುದೇ ಬಗೆಯ ವ್ಯವಹಾರದ ನಷ್ಟವನ್ನು ತಡೆಯಬಹುದಾಗಿದೆ. ಇದರಿಂದ ಗ್ರಾಹಕರಿಗೆ ಸಂಸ್ಥೆಯ ಮೇಲಿನ ವಿಶ್ವಾಸ ವೃದ್ಧಿಯಾಗುತ್ತದೆ.**

ಯಾವುದೇ ಬಗೆಯ ವ್ಯವಹಾರದಲ್ಲಿ ತೊಡಗಿಕೊಂಡಿರುವ ಸಂಸ್ಥೆಯೇ ಇರಲಿ, ಅದರ ಯಶಸ್ಸಿನ ಹಿಂದೆ ಪ್ರಾಮಾಣಿಕವಾಗಿ ದುಡಿಯುವ ಕಾರ್ಮಿಕರು ಹಾಗೂ ದಕ್ಷ ಕೆಲಸಗಾರ ಸಿಬ್ಬಂದಿವರ್ಗ ಇರುತ್ತದೆ. ಹೀಗೆ ಸಂಸ್ಥೆಯೊಂದು ನಿರಂತರವಾಗಿ ಪ್ರಗತಿ ಹೊಂದಬೇಕಾದಲ್ಲಿ, ಆರ್ಥಿಕವಾಗಿ ಅಭಿವೃದ್ಧಿ ಹೊಂದುವಂತಾಗಬೇಕಾದಲ್ಲಿ, ಮೊದಲಿಗೆ ಆ ಸಂಸ್ಥೆಯ ಸಿಬ್ಬಂದಿ ವರ್ಗದವರಿಗೆ ಕಾಲ ಕಾಲಕ್ಕೆ ಅಗತ್ಯ ಶೈಕ್ಷಣಿಕ, ತಾಂತ್ರಿಕ ತರಬೇತಿಗಳನ್ನು ನೀಡಬೇಕಿರುತ್ತದೆ. ಈ ನಿಟ್ಟಿನಲ್ಲಿ ಶಿಕ್ಷಣ ಹಾಗೂ ತರಬೇತಿ ವ್ಯವಸ್ಥೆ ಮಾಡುವುದು, ಅದನ್ನು ಸಮರ್ಪಕವಾಗಿ ನಿಭಾಯಿಸುವ ಜವಾಬ್ದಾರಿ ಸಂಸ್ಥೆಯದ್ದೇ ಆಗಿದೆ.

ನಮ್ಮ ಪಟ್ಟಣ ಸಹಕಾರ ಬ್ಯಾಂಕುಗಳ ಆಡಳಿತ ಮಂಡಳಿಗಳು ತಮ್ಮ ಸಿಬ್ಬಂದಿ ವರ್ಗದವರ ಕಾರ್ಯಕ್ಷಮತೆಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ಅವರಿಗೆ ಸೂಕ್ತ ಶಿಕ್ಷಣ, ತರಬೇತಿಗಳನ್ನು ಆಯೋಜಿಸಬೇಕಿರುತ್ತದೆ. ಹಾಗೆಯೇ, ಅವರುಗಳು ಬ್ಯಾಂಕಿಂಗ್ ಕ್ಷೇತ್ರದ ಪ್ರಚಲಿತ ವಿದ್ಯಮಾನದ ಅರಿವು ಬೆಳಸಿಕೊಳ್ಳಲು ಸಾಧ್ಯವಾದಲ್ಲಿ, ಅವರ ಕೆಲಸ ಕಾರ್ಯಗಳಲ್ಲಿ ಹೆಚ್ಚಿನ ದಕ್ಷತೆ ಕಂಡುಬರುತ್ತದೆ. ಹೀಗೆ, ಬ್ಯಾಂಕುಗಳು ಉನ್ನತ ಮಟ್ಟದಲ್ಲಿ ಗ್ರಾಹಕ ಸ್ನೇಹಿ ಸಂಸ್ಥೆಯಾಗಿ ಬೆಳೆಯುತ್ತವೆ. ಈ ನಿಟ್ಟಿನಲ್ಲಿ ನಮ್ಮ ಸಹಕಾರ ಬ್ಯಾಂಕುಗಳು ಕಾಲಕಾಲಕ್ಕೆ ತಮ್ಮ ನೌಕರರ ಶಿಕ್ಷಣ, ತರಬೇತಿ ಹಾಗೂ ಇತರ ಸೌಲಭ್ಯಗಳ ಬಗ್ಗೆ ಹೆಚ್ಚಿನ ಗಮನಹರಿಸುವುದು ಸೂಕ್ತವೆಂದು ಭಾವಿಸುತ್ತೇವೆ.

ಇದರೊಂದಿಗೆ ಸಂಸ್ಥೆಯ ನಿತ್ಯದ ವ್ಯವಹಾರದಲ್ಲಿ ಪಾರದರ್ಶಕತೆ ರೂಪಿಸುವುದು ಕೂಡ ಅಗತ್ಯ. ಭದ್ರ ತಳಹದಿಯ ಮೇಲೆ ರೂಪುಗೊಳ್ಳುವ ಮೌಲ್ಯಾಧಾರಿತ ಪಾರದರ್ಶಕತೆಯಿಂದಾಗಿ ಸಂಸ್ಥೆಯೂ ಪ್ರಗತಿಯತ್ತ ದಾಪುಗಾಲು ಹಾಕಲು ಸಾಧ್ಯ. ಸಂಸ್ಥೆಗಳು ತಾವು ತೆಗೆದುಕೊಳ್ಳಬಹುದಾದ ನೀತಿ–ನಿರ್ಧಾರಗಳ ಮತ್ತು ಅದರ ಕಾರ್ಯವಿಧಾನಗಳ ಬಗ್ಗೆ ಗ್ರಾಹಕರಿಗೆ ಸ್ಪಷ್ಟವಾದ ಮಾಹಿತಿ ರವಾನೆ ಮಾಡುವುದು ಈ ಪಾರದರ್ಶಕತೆಯ ಮೊದಲ ಹೆಜ್ಜೆ. ಪಾರದರ್ಶಕತೆಯಿಂದ ವ್ಯವಹಾರದ ಗುಣಮಟ್ಟವನ್ನು ಹೆಚ್ಚಿಸಬಹುದು. ಹಾಗೆಯೇ, ಯಾವುದೇ ಬಗೆಯ ವ್ಯವಹಾರದ ನಷ್ಟವನ್ನು ತಡೆಯಬಹುದಾಗಿದೆ. ಇದರಿಂದ ಗ್ರಾಹಕರಿಗೆ ಸಂಸ್ಥೆಯ ಮೇಲಿನ ವಿಶ್ವಾಸ ವೃದ್ಧಿಯಾಗುತ್ತದೆ.

ಹಣಕಾಸು ಸಂಸ್ಥೆಗಳು ತಾವು ನಿರ್ಧರಿಸುವ ಠೇವಣಿಗಳ ಮೇಲಿನ ಬಡ್ಡಿ, ನೀಡುವ ಸಾಲ–ಮುಂಗಡಗಳು ಹಾಗೂ ಹೂಡಿಕೆಗಳಲ್ಲಿ ಪಾರದರ್ಶಕತೆಯನ್ನು ಅಳವಡಿಸಿಕೊಂಡಲ್ಲಿ, ಮುಂದೆ ಆಗಬಹುದಾದ ಯಾವುದೇ ಬಗೆಯ ನಷ್ಟಗಳನ್ನು ತಡೆಯಬಹುದಾಗಿದೆ.

ಹೂಡಿಕೆದಾರರು, ಷೇರುದಾರರು, ನಿಯಂತ್ರಕರು ಮತ್ತು ಇತರೆ ಮಧ್ಯಸ್ಥಗಾರರ ಅನುಕೂಲಕ್ಕಾಗಿ ತನ್ನ ಎಲ್ಲಾ ಮಾಹಿತಿಯನ್ನು ಸೂಕ್ತ ರೀತಿಯಲ್ಲಿ ಕಾಲಕಾಲಕ್ಕೆ ಬಹಿರಂಗಪಡಿಸುವ ಹೊಣೆಗಾರಿಕೆ ಸಂಸ್ಥೆಯ ಆಡಳಿತ ಮಂಡಳಿಗಳದ್ದಾಗಿದೆ. ರಾಜ್ಯದ ನಮ್ಮ ಪಟ್ಟಣ ಸಹಕಾರ ಬ್ಯಾಂಕುಗಳು ಈಗಾಗಲೇ ಪಾರದರ್ಶಕತೆಗೆ ಹೆಚ್ಚು ಗಮನಹರಿಸುತ್ತಿರುವುದು ಗಮನಿಸಬಹುದಾಗಿದೆ. ಬ್ಯಾಂಕಿಂಗ್ ಸೇವಾ ಸಮಗ್ರತೆಯು, ನಾಯಕತ್ವದಲ್ಲಿ ನೈತಿಕತೆ, ಉತ್ತಮ ಸಾಂಸ್ಥಿಕ ಆಡಳಿತ, ಭ್ರಷ್ಟಾಚಾರ ರಹಿತ ವ್ಯವಸ್ಥೆ ಹಾಗೂ ಮೇಲ್ವಿಚಾರಣಾ ನಿಯಂತ್ರಣಗಳನ್ನೊಳಪಟ್ಟಲ್ಲಿ, ಸದಸ್ಯರ ಹೂಡಿಕೆದಾರರ ವಿಶ್ವಾಸ ವೃದ್ಧಿಯಾಗಿ ಸಂಸ್ಥೆಗಳು ಹೆಮ್ಮರವಾಗಿ ಬೆಳೆಯುತ್ತವೆ, ಬೆಳೆಯಲಿ ಎಂದು ಆಶಿಸುತ್ತೇವೆ.

## ಒಳಪುಟಗಳಲ್ಲಿ...

ನೂತನ ಸಹಕಾರ ಸಚಿವರಾಗಿ ಲಕ್ಷ್ಮಣ ಸವದಿ ........ 5

ಡಿಜಿಟಲ್ ಇಂಡಿಯಾದ ಸ್ಕ್ಯಾನರುಗಳ ಬಲೆಯ ನೆರಳಿನಲ್ಲಿ ಬಿಕರಿಯಾಗುತ್ತಿರುವ ಭಾರತೀಯರು ........ 6

2030ರ ವೇಳೆಗೆ $250 ಬಿಲಿಯನ್ ಆಗಲಿದೆ ಭಾರತದ ಇ-ಕಾಮರ್ಸ್ ಮಾರ್ಕೆಟ್ : AI ನಿಂದ 5ವರ್ಷದಲ್ಲೇ 3 ಪಟ್ಟು ಜಿಗಿತದ ನಿರೀಕ್ಷೆ; ಎಐ ಫಾರ್ ಕಾಮರ್ಸ್ ವರದಿಯಲ್ಲಿ ಬಹಿರಂಗ! ........ 7

ಸರ್ ಎಂ. ವಿಶ್ವೇಶ್ವರಯ್ಯ ಸಹಕಾರ ಬ್ಯಾಂಕ ನಿಯಮಿತ ಕಲಬುರಗಿ ಬ್ಯಾಂಕು ನಡೆದುಬಂದ ದಾರಿ ........ 8

ಹೂಡಿಕೆಗೂ ಆರ್‌ಡಿ / ಎಫ್‌ಡಿ ಯಾವುದರಲ್ಲಿ ಲಾಭ ಹೆಚ್ಚು? ........ 9

ರಿಸರ್ವ್ ಬ್ಯಾಂಕಿನ ನೇರ ಹೊಣೆಗಾರಿಕೆಯ ಡಿಜಿಟಲ್ ರೂಪಾಯಿ ಚಲಾವಣೆಗೆ ಸುರಕ್ಷಿತ ಹಾಗೂ ಸುಲಭ ........ 10

2026ರಲ್ಲಿ ಕರ್ನಾಟಕದ ಆರ್ಥಿಕತೆ : ಅಭಿವೃದ್ಧಿಯ ಹೊಸ ಎತ್ತರದತ್ತ ದಿಟ್ಟ ಹೆಜ್ಜೆ ........ 12

ದಿ ಮೈಸೂರು ಮರ್ಚೆಂಟ್ಸ್ ಕೋ-ಆಪರೇಟಿವ್ ಬ್ಯಾಂಕ್ ಲಿ., ಮೈಸೂರು – ಯಶೋಗಾಥೆ ........ 14

ಚಾರ್ಟರ್ಡ್ ಸಹಕಾರಿ ಬ್ಯಾಂಕ್ ನಿಯಮಿತ ಸಂಸ್ಥೆಯ ಹುಟ್ಟು ಮತ್ತು ಬೆಳವಣಿಗೆ ಮತ್ತು ನಡೆದು ಬಂದ ದಾರಿ ........ 21

ಭಾರತೀಯ ಮಾರುಕಟ್ಟೆಗಳಿಂದ ಹೊರನಡೆಯುತ್ತಿರುವ ಹೂಡಿಕೆದಾರರು ........ 23

ಕರ್ನಾಟಕ ಸಹಕಾರ ಸಂಘಗಳ ಅಧಿನಿಯಮ, 1959 ಮತ್ತು ನಿಯಮಗಳು 1960 ಮುಖ್ಯಾಂಶಗಳು ........ 25

ಡಿಜಿಟಲ್ ಬ್ಯಾಂಕಿಂಗ್ – ಸಹಕಾರಿ ಬ್ಯಾಂಕ್‌ಗಳಿಗೆ ಅವಕಾಶಗಳು ಮತ್ತು ಸವಾಲುಗಳು ........ 31

61 ವರ್ಷ ಪೂರೈಸಿ ಪ್ರಗತಿಯಲ್ಲಿ ಸಾಗುತ್ತಿರುವ ಇಲಕಲ್ಲ ಕೋ-ಆಪರೇಟಿವ್ ಬ್ಯಾಂಕ್ ಲಿ., ಇಲಕಲ್ಲ ........ 36

ಪಟ್ಟಣ ಸಹಕಾರ
ಬ್ಯಾಂಕಿಂಗ್ ಪ್ರಪಂಚ

ಸಂಪುಟ : 14 ಸಂಚಿಕೆ : 3

ಪಟ್ಟಣ ಸಹಕಾರ ಬ್ಯಾಂಕುಗಳ ತ್ರೈಮಾಸಿಕ ಪತ್ರಿಕೆ

ಜುಲೈ / ಆಗಸ್ಟ್ / ಸೆಪ್ಟೆಂಬರ್ 2026

**ಶ್ರೀ ಎಚ್.ಕೆ. ಪಾಟೀಲ**
ಗೌರವಾಧ್ಯಕ್ಷರು

**ಶ್ರೀ ಬಿ.ಎಸ್. ಪರಮಶಿವಯ್ಯ**
ಉಪಾಧ್ಯಕ್ಷರು

**ಶ್ರೀ ಪುಂಡಲೀಕ ಎನ್. ಕೇರೂರೆ**
ಮುಖ್ಯ ಕಾರ್ಯನಿರ್ವಹಣಾಧಿಕಾರಿ/
ಸಂಪಾದಕರು

**ಸಂಚಿಕೆ ನಿರ್ವಹಣೆ / ವಿನ್ಯಾಸ :**
ವರ್ಣ ಕಮ್ಯೂನಿಕೇಷನ್

**ಪ್ರಕಟಣೆ :**
**ಕರ್ನಾಟಕ ರಾಜ್ಯ ಸಹಕಾರ ಪಟ್ಟಣ ಬ್ಯಾಂಕುಗಳ ಮಹಾಮಂಡಳ ನಿ.,**
ನಂ. 132, ಕೆ.ಎಚ್. ರಸ್ತೆ, ಬೆಂಗಳೂರು - 27

**ದೂರವಾಣಿ :**
080-22233662, 080-22279574

**ಇ-ಮೇಲ್ :**
editorkubf@gmail.com

**ಅಂತರ್ಜಾಲ :** www.ksubfed.com

**ಮುದ್ರಣ :** ನವರತ್ನ ಪ್ರಿಂಟರ್ಸ್, ಬೆಂಗಳೂರು.

## ನೂತನ ಸಹಕಾರ ಸಚಿವರಾಗಿ ಲಕ್ಷ್ಮಣ ಸವದಿ



ಕರ್ನಾಟಕ ರಾಜ್ಯ ಸರ್ಕಾರದ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ನೇತೃತ್ವದ ಸಂಪುಟದ ಸಚಿವರುಗಳಿಗೆ ಖಾತೆಗಳ ಹಂಚಿಕೆ ಮಾಡಲಾಗಿದೆ. ಸಹಕಾರ ಖಾತೆಯ ನೂತನ ಸಚಿವರಾಗಿ ಹಿರಿಯ ಸಹಕಾರಿ ಮುಖಂಡರೂ, ಮಾಜಿ ಉಪಮುಖ್ಯಮಂತ್ರಿಗಳಾದ ಲಕ್ಷ್ಮಣ ಸಂಗಪ್ಪ ಸವದಿ ಅವರು ನೇಮಕಗೊಂಡಿದ್ದಾರೆ.

ಲಕ್ಷ್ಮಣ ಸವದಿ ಅವರು ಈ ಹಿಂದೆ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಮತ್ತು ಸದಾನಂದಗೌಡರವರ ಸಚಿವ ಸಂಪುಟದಲ್ಲಿ ಸಹಕಾರ ಸಚಿವರಾಗಿಯೂ ಕಾರ್ಯನಿರ್ವಹಿಸಿರುವ ಅನುಭವ ಹೊಂದಿದ್ದಾರೆ.

ಅಲ್ಲದೆ, ಈ ಹಿಂದಿನ ಸರ್ಕಾರಗಳಲ್ಲಿ ಕೃಷಿ ಸಚಿವರಾಗಿಯೂ ಸೇವೆ ಸಲ್ಲಿಸಿದ್ದಾರೆ. ಬೆಳಗಾವಿ ಜಿಲ್ಲೆಯ ಅಥಣಿ ವಿಧಾನಸಭಾ ಕ್ಷೇತ್ರದವರಾದ ಲಕ್ಷ್ಮಣ ಸಂಗಪ್ಪ ಸವದಿ ಅವರು ವಿಧಾನ ಪರಿಷತ್ತಿನ ಸದಸ್ಯರಾಗಿ, ನಂತರ ಪರಿಷತ್ತಿನ ಉಪನಾಯಕರಾಗಿಯೂ ಸೇವೆ ಸಲ್ಲಿಸಿದ್ದಾರೆ.

## ಕಳೆದ 5 ವರ್ಷಗಳಲ್ಲಿ 100 ಕೋಟಿ ರೂ.ಗೂ ಅಧಿಕ ಆದಾಯ ಘೋಷಿಸಿದ ಭಾರತೀಯರ ಸಂಖ್ಯೆ ನಾಲ್ಕು ಪಟ್ಟು ಹೆಚ್ಚಳ!

**ನವದೆಹಲಿ:** ಕಳೆದ ಐದು ವರ್ಷಗಳಲ್ಲಿ 100 ಕೋಟಿ ರೂಪಾಯಿ ಅಥವಾ ಅದಕ್ಕಿಂತ ಹೆಚ್ಚಿನ ಆದಾಯ ಘೋಷಿಸಿದ ವ್ಯಕ್ತಿಗಳ ಸಂಖ್ಯೆ ನಾಲ್ಕು ಪಟ್ಟು ಹೆಚ್ಚಾಗಿದೆ ಎಂದು ಕೇಂದ್ರ ಹಣಕಾಸು ಸಚಿವಾಲಯವು ಸಂಸತ್ತಿನಲ್ಲಿ ಮಂಡಿಸಿದ ಅಂಕಿ–ಅಂಶಗಳು ತಿಳಿಸಿವೆ.

ಅಧಿಕೃತ ಮಾಹಿತಿಯ ಪ್ರಕಾರ, ಆದಾಯ ತೆರಿಗೆ ರಿಟರ್ನ್‌ಗಳಲ್ಲಿ 100 ಕೋಟಿ ರೂಪಾಯಿ ಅಥವಾ ಅದಕ್ಕಿಂತ ಹೆಚ್ಚಿನ ಒಟ್ಟು ಆದಾಯ ಘೋಷಿಸಿದವರ ಸಂಖ್ಯೆ 2021–22ರ ಮೌಲ್ಯಮಾಪನ ವರ್ಷದಲ್ಲಿ 142 ಇದ್ದರೆ, ಅದು 2025–26ರಲ್ಲಿ 576ಕ್ಕೆ ಏರಿಕೆಯಾಗಿದೆ. ಮೊದಲ ಬಾರಿಗೆ ಇಂತಹ ಅತಿ ಹೆಚ್ಚು ಆದಾಯ ಹೊಂದಿದವರ ಸಂಖ್ಯೆ 500ರ ಗಡಿ ದಾಟಿದೆ.

ದೇಶದಲ್ಲಿ ಆದಾಯ ಮತ್ತು ಸಂಪತ್ತು ಹೆಚ್ಚುತ್ತಿರುವುದು ಆದಾಯ ಅಸಮಾನತೆ, ಹೂಡಿಕೆ, ಉದ್ಯೋಗ ಸೃಷ್ಟಿ ಹಾಗೂ ಬಿಲಿಯನೇರ್‌ಗಳ ಸಂಖ್ಯೆಯ ಮೇಲೆ ಬೀರುವ ಪರಿಣಾಮ ಕುರಿತು ಸಂಸತ್ತಿನಲ್ಲಿ ಕೇಳಿದ ಪ್ರಶ್ನೆಗೆ ಉತ್ತರಿಸಿದ ಕೇಂದ್ರ ಹಣಕಾಸು ಖಾತೆ ರಾಜ್ಯ ಸಚಿವ ಪಂಕಜ್ ಚೌಧರಿ, 2025ರ ಆದಾಯ ತೆರಿಗೆ ಕಾಯ್ದೆ ಅಥವಾ ಹಿಂದಿನ 1961ರ ಆದಾಯ ತೆರಿಗೆ ಕಾಯ್ದೆಯಲ್ಲಿ 'ಬಿಲಿಯನೇರ್' ಎಂಬ ಪದಕ್ಕೆ ಯಾವುದೇ ಕಾನೂನುಬದ್ಧ ವ್ಯಾಖ್ಯಾನವಿಲ್ಲ ಎಂದು ತಿಳಿಸಿದ್ದಾರೆ. ಆದರೆ, ಕಳೆದ ಐದು ಮೌಲ್ಯಮಾಪನ ವರ್ಷಗಳಲ್ಲಿ ಐಟಿಆರ್‌ನಲ್ಲಿ 100 ಕೋಟಿ ರೂಪಾಯಿ ಅಥವಾ ಅದಕ್ಕಿಂತ ಹೆಚ್ಚಿನ ಒಟ್ಟು ಆದಾಯ ಘೋಷಿಸಿದ ವ್ಯಕ್ತಿಗಳ ವಿವರಗಳನ್ನು ಅವರು ನೀಡಿದರು.

ಆದಾಯ ಅಸಮಾನತೆ ಕಡಿಮೆ ಮಾಡಲು ಸರ್ಕಾರ ಹಲವು ಕ್ರಮಗಳನ್ನು ಕೈಗೊಂಡಿದೆ ಎಂದು ಸಚಿವರು ತಿಳಿಸಿದ್ದಾರೆ. 2023–24ರ ಗೃಹ ಬಳಕೆ ವೆಚ್ಚ




ಸಮೀಕ್ಷೆ ಅಂಕಿ–ಅಂಶಗಳನ್ನು ಉಲ್ಲೇಖಿಸಿದ ಅವರು, ಗ್ರಾಮೀಣ ಪ್ರದೇಶದ ಗಿನಿ ಗುಣಾಂಕ 2022–23ರ 0.266 ರಿಂದ 0.237ಕ್ಕೆ ಹಾಗೂ ನಗರ ಪ್ರದೇಶದಲ್ಲಿ 0.314 ರಿಂದ 0.284ಕ್ಕೆ ಇಳಿದಿದೆ. ಇದರಿಂದ ಗ್ರಾಮೀಣ–ನಗರ ಆದಾಯ ಅಸಮಾನತೆಯ ಅಂತರ ಕಡಿಮೆಯಾಗುತ್ತಿರುವುದು ಗೋಚರಿಸುತ್ತದೆ ಎಂದು ಅವರು ವಿವರಿಸಿದರು.

ಆದರೆ, ವಿಶ್ವ ಅಸಮಾನತೆ ವರದಿ–2026 ಪ್ರಕಾರ, ಭಾರತದಲ್ಲಿ ಆದಾಯ ಅಸಮಾನತೆ ಇನ್ನೂ ವಿಶ್ವದಲ್ಲೇ ಅತ್ಯಧಿಕ ಮಟ್ಟದಲ್ಲಿದ್ದು, ದೇಶದ ಅಗ್ರ 10 ಶೇಕಡಾ ಜನರು ರಾಷ್ಟ್ರೀಯ ಆದಾಯದ 58 ಶೇಕಡಾ ಪಾಲನ್ನು ಹೊಂದಿದ್ದರೆ, ಕೆಳಗಿನ 50 ಶೇಕಡಾ ಜನರಿಗೆ ಕೇವಲ 15 ಶೇಕಡಾ ಆದಾಯ ಮಾತ್ರ ಲಭಿಸುತ್ತಿದೆ.

# ಡಿಜಿಟಲ್ ಇಂಡಿಯಾದ ಸ್ಕ್ಯಾನರುಗಳ ಬಲೆಯ ನೆರಳಿನಲ್ಲಿ ಬಿಕರಿಯಾಗುತ್ತಿರುವ ಭಾರತೀಯರು

ಇತ್ತೀಚಿನ ಲೋಕಸಭೆಯಲ್ಲಿ ತಿದ್ದುಪಡಿಯಾದ ಒಂದು ಕಾಯ್ದೆಯ ಮೂಲಕ ಜನರು ನಿತ್ಯ ವ್ಯವಹರಿಸುವ ದುಡ್ಡಿನ ಬಗ್ಗೆ ಚರ್ಚೆಯಾಗುತ್ತಿದೆ. ಆದರೆ ಸೇವೆ ಒದಗಿಸುವ ಕಂಪನಿಗಳು ಇಷ್ಟು ದಿನ ಪುಗಸಟ್ಟೆಯಾಗಿ ಯಾಕೆ ಸರ್ವೀಸ್ ನೀಡಿದವು ಎಂಬುದರ ಕುರಿತಾಗಿ ಹೆಚ್ಚು ಚರ್ಚೆಯಾಗಲಿಲ್ಲ. ಅಸಲಿಗೆ ಚರ್ಚೆಯಾಗಬೇಕಿದ್ದೇ ಆ ಉಚಿತ ಸೇವೆಯ ಬಗ್ಗೆ, ಅದರ ಹಿಂದಿರುವ ದೊಡ್ಡ ಹಗರಣದ ಬಗ್ಗೆ. ಆದರೆ ನಮ್ಮ ದೇಶದ ದುರಂತ ಡಿಜಿಟಲ್ ಭಾರತದಲ್ಲಿ ನಮ್ಮ ಬೆರಳ ತುದಿಯಲ್ಲೇ ನಮ್ಮನ್ನು ನಾವು ಬಿಕರಿಗಿಟ್ಟ ಸರಕಾಗಿ ಹೋಗಿದ್ದೇವೆ.

ಭಾರತದಲ್ಲಿ ಡಿಜಿಟಲ್ ಪಾವತಿ ವ್ಯವಸ್ಥೆ ವರ್ಷದಿಂದ ವರ್ಷಕ್ಕೆ, ದಿನದಿಂದ ದಿನಕ್ಕೆ ಜನಪ್ರಿಯಗೊಳ್ಳುತ್ತಿದೆ. ಇದರ ಹಿಂದೆ ದೊಡ್ಡ ಪ್ರಮಾಣದ ಆರ್ಥಿಕ ಹಾಗೂ ತಾಂತ್ರಿಕ ಜಾಲವೇ ಅಡಗಿದೆ. ಈ ಕುರಿತು ಇತ್ತೀಚಿನ ಬೆಳವಣಿಗೆಗಳು ಮತ್ತು ಸರ್ಕಾರದ ಹೊಸ ಮಸೂದೆಗಳ ಭಯಾನಕ ಎನಿಸುವ ಸಂಗತಿಗಳ ಕಡೆಗೆ ನಮ್ಮ ನೋಟವನ್ನು ಸೆಳೆಯುತ್ತಿವೆ.

ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಅವರು ಲೋಕಸಭೆಯಲ್ಲಿ 'ಟ್ಯಾಕ್ಸೇಶನ್ ಅಂಡ್ ಅದರ್ ಲಾಸ್ ತಿದ್ದುಪಡಿ 2026 ಮಸೂದೆಯನ್ನು ಮಂಡಿಸಿದ್ದು, ಇದು 'ಪೇಮೆಂಟ್ ಅಂಡ್ ಸೆಟಲ್ಮೆಂಟ್ ಸಿಸ್ಟಮ್ **(PSS)** ಆಕ್ಟ್ 2007'ಕ್ಕೆ ತಿದ್ದುಪಡಿ ತಂದಿದೆ. ಇದರ ಮುಖಾಂತರ ಭವಿಷ್ಯದಲ್ಲಿ ಡಿಜಿಟಲ್ ಪಾವತಿಗಳು ಮತ್ತು ಯುಪಿಐ ಸ್ಕ್ಯಾನ್‌ಗಳಿಗೆ ಶುಲ್ಕ ವಿಧಿಸಲು ಕಾನೂನು ರೂಪಿಸಿಕೊಳ್ಳಲಾಗುತ್ತಿದೆ ಎಂಬಲ್ಲಿಂದ ಶುರುವಾಗಿ ಅಲ್ಲಿಯೇ ಅಂತ್ಯವಾಗುವ ಎಲ್ಲಾ ಅಪಾಯಗಳು ಕಾಣಿಸುತ್ತಿವೆ.

### ರೂ.314 ಲಕ್ಷ ಕೋಟಿ ವಹಿವಾಟು : ದೇಶದ ಬಜೆಟ್ ಮೀರಿಸಿದ ಮೊತ್ತ!

ದೇಶದಲ್ಲಿ ಒಂದು ವರ್ಷದಲ್ಲಿ ಭಾರತೀಯರು ಯುಪಿಐ ಮುಖಾಂತರ ಬರೋಬ್ಬರಿ ರೂ.314 ಲಕ್ಷ ಕೋಟಿ ರೂಪಾಯಿಗಳಷ್ಟು ದೊಡ್ಡ ಮೊತ್ತದ ಹಣವನ್ನು ವಹಿವಾಟು ನಡೆಸುತ್ತಿದ್ದಾರೆ. ಇದು ಭಾರತದ ವಾರ್ಷಿಕ ಬಜೆಟ್‌ಗಿಂತಲೂ ದೊಡ್ಡ ಮೊತ್ತವಾಗಿದೆ. ಆದರೆ ಇಷ್ಟು ದೊಡ್ಡ ಪ್ರಮಾಣದ ಆರ್ಥಿಕ ಚಲನವಲನೆಗಳು ಸರ್ಕಾರದ ಸಂಪೂರ್ಣ ಹಿಡಿತದಲ್ಲಿಲ್ಲದೆ, ಫೋನ್‌ಪೇ, ಗೂಗಲ್‌ಪೇ ಮುಂತಾದ ಅಮೆರಿಕ ಸೇರಿದಂತೆ ವಿದೇಶದ ಖಾಸಗಿ ದೈತ್ಯ ಸಂಸ್ಥೆಗಳ ಕೈಯಲ್ಲಿ ನಿರ್ವಹಿಸಲ್ಪಡುತ್ತಿರುವುದು ಬಹಳ ಗಂಭೀರ ವಿಷಯ. ದೇಶದ ಆರ್ಥಿಕ ಬೆನ್ನೆಲುಬಾದ ಪ್ರಮುಖ ದತ್ತಾಂಶವನ್ನು ಖಾಸಗಿ ವಿದೇಶಿ ಸಂಸ್ಥೆಗಳಿಗೆ ಒಪ್ಪಿಸುತ್ತಿರುವುದು ಅಘಾತಕಾರಿ ಸಂಗತಿಯಾಗಿದೆ.

### ಡೇಟಾ ದರೋಡೆ ಮತ್ತು ಡೇಟಾ ಸೆಕ್ಯೂರಿಟಿ ಲೋಪಗಳು

ಇಂದಿನ ತಂತ್ರಜ್ಞಾನ ಯುಗದಲ್ಲಿ ಹಣಕ್ಕಿಂತಲೂ ಮಿಗಿಲಾಗಿ 'ಮಾಹಿತಿ' (ಡೇಟಾ) ದೊಡ್ಡ ಸಂಪತ್ತು. ಭಾರತದ 140 ಕೋಟಿ ಜನರ ದೈನಂದಿನ




ಚಲನವಲನಗಳು, ಎಲ್ಲಿಗೆ ಹೋಗುತ್ತೇವೆ, ಏನು ಖರೀದಿಸುತ್ತೇವೆ ಎಂಬ ಸಂಪೂರ್ಣ ಮಾಹಿತಿ ಡಿಜಿಟಲ್ ಆಪ್‌ಗಳ ಮೂಲಕ ಸಂಗ್ರಹವಾಗುತ್ತಿದೆ. ನಾವು ಯಾವುದಾದರೂ ಉತ್ಪನ್ನದ ಹೆಸರನ್ನು ಬಾಯಿಯಿಂದ ಉಚ್ಚರಿಸಿದರೂ ಕೂಡ, ತಕ್ಷಣವೇ ಮೊಬೈಲ್ ಸ್ಕ್ರೀನ್ ಮೇಲೆ ಅದೇ ಜಾಹೀರಾತುಗಳು ಕಾಣಿಸಿಕೊಳ್ಳುವುದೇ ಇದಕ್ಕೆ ಸಾಕ್ಷಿ. ಈ ಬೃಹತ್ ಡೇಟಾಬೇಸ್ ಜಾಲದ ಮೂಲಕ ಜನಸಾಮಾನ್ಯರ ಮಾಹಿತಿಯನ್ನು ಹೊರದೇಶಗಳಿಗೆ ಸೋರಿಕೆ ಮಾಡಲಾಗುತ್ತಿದೆ. ಇದೊಂದು ಬಹಳ ಗಂಭೀರವಾದ ಸಮಸ್ಯೆ ಎಂದು ಪರಿಗಣಿಸದೇ ಹೋದರೆ ನಮ್ಮ ದೇಶದ ಅಧಃಪತನಕ್ಕೆ ಈ ನಮ್ಮ ಡೇಟಾ ಸೋರಿಕೆಯೇ ಕಾರಣವಾಗುತ್ತದೆ. ಹಾಗೆ ಡೇಟಾ ಸಂಗ್ರಹಿಸಲು ಅನುವು ಮಾಡಿಕೊಟ್ಟ ಸರ್ಕಾರ ಕಾರಣವಾಗುತ್ತದೆ. ಆದರೆ ಇದೆಲ್ಲಾ ಜನರಿಗೆ ಅರ್ಥವಾಗುತ್ತದೆಯೇ...?

### ಅಂತಿಮವಾಗಿ ಭಾರ ಬೀಳುವುದು ಗ್ರಾಹಕರ ಮೇಲೆಯೇ!

ಯುಪಿಐ ವಹಿವಾಟುಗಳಿಗೆ ಶುಲ್ಕ ವಿಧಿಸಿದ್ದೇ ಆದರೆ, ಆರಂಭದಲ್ಲಿ ನೇರವಾಗಿ ಗ್ರಾಹಕರ ಖಾತೆಯಿಂದ ಹಣ ಕಡಿತವಾಗದಿದ್ದರೂ, ವ್ಯಾಪಾರಿಗಳು ಗ್ರಾಹಕರ ಮೇಲೆ ಶುಲ್ಕ ಹಾಕದಂತೆ ಯಾವುದೇ ನಿಯಮ ರೂಪಿಸಲಾಗಿಲ್ಲವಾದ್ದರಿಂದ, ಹೊರೆ ಗ್ರಾಹಕರ ಮೇಲೆ ಬೀಳುವುದರಲ್ಲಿ ಯಾವ ಅನುಮಾನವೂ ಇಲ್ಲ.

### ಡಿಜಿಟಲ್ ಹಣ ನಮ್ಮ ದುಡಿಮೆಗೆ ಬೆಲೆ ಕೊಡಲ್ಲ...

ತಿಂಗಳಿಡೀ ದುಡಿದ ದುಡಿಮೆ ಈ ಮೊದಲು ನಾವು ನೋಟುಗಳ ಮೂಲಕ ವ್ಯವಹರಿಸುತ್ತಿದ್ದೆವು. ಈಗ ಕೈಯಲ್ಲಿ ನಗದು ಹಣದ ಚಲಾವಣೆ ಇಲ್ಲದೆ ಕೇವಲ ಮೊಬೈಲ್ ಮೂಲಕ ಹಣ ಖರ್ಚು ಮಾಡುವುದರಿಂದ ನಮಗೆ ಎಷ್ಟು ಹಣ ಖರ್ಚಾಗುತ್ತಿದೆ ಎಂಬ ಅರಿವೇ ಆಗುತ್ತಿಲ್ಲ. ನಮ್ಮ ಆದಷ್ಟೂ ದುಡಿಮೆಯ ದುಡ್ಡು ಒಂದು ಮೆಸೇಜಾಗಿ ನಮ್ಮ ಮೊಬೈಲಿಗೆ ಬಂದು ಬೀಳುತ್ತದೆ. ಅದೇ ಮೊಬೈಲಿನ ಮೂಲಕ ಕೆಲವೇ ದಿನಗಳಲ್ಲಿ ಖರ್ಚಾಗಿ ಹೋಗುತ್ತದೆ. ದುಡ್ಡನ್ನು ಮಿತವಾಗಿ ಬಳಸಿದರೆ ಏನಾಗಲ್ಲ ಅಂತ ಹೇಳಬಹುದು. ಆದರೆ ನಮ್ಮ

7ನೇ ಪುಟಕ್ಕೆ...

# 2030ರ ವೇಳೆಗೆ $250 ಬಿಲಿಯನ್ ಆಗಲಿದೆ ಭಾರತದ ಇ-ಕಾಮರ್ಸ್ ಮಾರ್ಕೆಟ್ : AI ನಿಂದ 5ವರ್ಷದಲ್ಲೇ 3 ಪಟ್ಟು ಜಿಗಿತದ ನಿರೀಕ್ಷೆ; ಎಐ ಫಾರ್ ಕಾಮರ್ಸ್ ವರದಿಯಲ್ಲಿ ಬಹಿರಂಗ!

**ಹೊಸದಿಲ್ಲಿ :** ಭಾರತದಲ್ಲಿ ಕೃತಕ ಬುದ್ಧಿಮತ್ತೆ (ಎಐ) ಆಧಾರಿತ ವಾಣಿಜ್ಯ ಸೇವೆಗಳು ವೇಗವಾಗಿ ವಿಸ್ತರಿಸುತ್ತಿದ್ದು, 2030ರ ವೇಳೆಗೆ ದೇಶದ ಇ-ಕಾಮರ್ಸ್ ಮಾರುಕಟ್ಟೆಯ ಗಾತ್ರ 250 ಬಿಲಿಯನ್ ಡಾಲರ್‌ಗೆ (ಅಂದಾಜು 24 ಲಕ್ಷ ಕೋಟಿ ರೂ.) ತಲುಪುವ ಸಾಧ್ಯತೆಯಿದೆ ಎಂದು ಶಿಪ್ರಾಕೆಟ್ ಮತ್ತು ಡೆಲಾಯ್ಟ್ ಜಂಟಿಯಾಗಿ ಬಿಡುಗಡೆ ಮಾಡಿರುವ "ಎಐ ಫಾರ್ ಕಾಮರ್ಸ್ ವರದಿ'ಯಲ್ಲಿ ಹೇಳಲಾಗಿದೆ.




### ಮುಂದಿನ 5 ವರ್ಷಗಳಲ್ಲಿ 3 ಪಟ್ಟು ಬೆಳೆಯಲಿದೆ ಭಾರತದ ಇ-ಕಾಮರ್ಸ್ ಮಾರ್ಕೆಟ್

ಪ್ರಸ್ತುತ ಸುಮಾರು 90 ಬಿಲಿಯನ್ ಡಾಲರ್ ಮೌಲ್ಯದ ಭಾರತದ ಇ-ಕಾಮರ್ಸ್ ಮಾರುಕಟ್ಟೆ ಮುಂದಿನ ದಿನಗಳಲ್ಲಿ ಗಮನಾರ್ಹವಾಗಿ ಬೆಳೆಯಲಿದೆ. ಎಐ ಆಧಾರಿತ ವೈಯಕ್ತಿಕರಣ, ಬುದ್ಧಿವಂತ ಚೆಕ್‌ಔಟ್ ವ್ಯವಸ್ಥೆ ಹಾಗೂ ಸುಧಾರಿತ ಲಾಜಿಸ್ಟಿಕ್ಸ್ ನೆರವಿನಿಂದ ಮುಂದಿನ 5 ವರ್ಷಗಳಲ್ಲಿ ಮೂರು ಪಟ್ಟು ಬೆಳವಣಿಗೆ ದಾಖಲಿಸಲಿದೆ ಎಂದು ವರದಿ ಅಂದಾಜಿಸಿದೆ.

ವರದಿಯ ಪ್ರಕಾರ, ಶೇ.90ರಷ್ಟು ಭಾರತೀಯ ಗ್ರಾಹಕರು ತಮ್ಮ ಆನ್‌ಲೈನ್ ಖರೀದಿ ಅನುಭವವನ್ನು 'ಜನರೇಟಿವ್ ಎಐ' ಉತ್ತಮಗೊಳಿಸಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ. ಎಐ ಬಳಸುವ ಬ್ರಾಂಡ್‌ಗಳು ಉತ್ತಮ ವ್ಯವಹಾರ ಫಲಿತಾಂಶಗಳನ್ನು ಪಡೆಯುತ್ತಿವೆ ಎಂದು ವರದಿ ತಿಳಿಸಿದೆ.

ಶಿಪ್ರಾಕೆಟ್‌ನ ವ್ಯವಸ್ಥಾಪಕ ನಿರ್ದೇಶಕ ಹಾಗೂ ಸಿಇಒ ಸಾಹಿಲ್ ಗೋಯೆಲ್ ಮಾತನಾಡಿ, "ಭಾರತದ ಇ-ಕಾಮರ್ಸ್ ಕ್ಷೇತ್ರ ಹೊಸ ಬೆಳವಣಿಗೆಯ ಹಂತವನ್ನು ಪ್ರವೇಶಿಸುತ್ತಿದೆ. ಗ್ರಾಹಕರು ಈಗ ವೇಗವಾದ, ವೈಯಕ್ತಿಕರಿಸಿದ ಹಾಗೂ ಅನುಕೂಲಕರ ಖರೀದಿ ಅನುಭವವನ್ನು ನಿರೀಕ್ಷಿಸುತ್ತಿದ್ದಾರೆ. ಇದಕ್ಕಾಗಿ ಕಂಪನಿಗಳು ಎಐ ಹಾಗೂ ಲಾಜಿಸ್ಟಿಕ್ಸ್ ಸಾಮರ್ಥ್ಯಗಳಲ್ಲಿ ಹೆಚ್ಚಿನ ಹೂಡಿಕೆ ಮಾಡಬೇಕಾಗಿದೆ," ಎಂದು ಹೇಳಿದರು.

ಡೆಲಾಯ್ಟ್ ಇಂಡಿಯಾದ ಪಾಲುದಾರ ಹಾಗೂ ಗ್ರಾಹಕ ಉದ್ಯಮ ವಿಭಾಗದ ಮುಖ್ಯಸ್ಥ ಡಾ. ಆನಂದ್ ರಾಮನಾಥನ್ ಮಾತನಾಡಿ, "ಎಐ ಅಳವಡಿಸಿಕೊಳ್ಳುವುದಷ್ಟೆ ಸಾಕಾಗುವುದಿಲ್ಲ. ಅದನ್ನು ವೇಗವಾಗಿ, ನಿಖರವಾಗಿ ಮತ್ತು ಪರಿಣಾಮಕಾರಿಯಾಗಿ ಬಳಸುವ ಸಂಸ್ಥೆಗಳೇ ಮುಂದಿನ ದಿನಗಳಲ್ಲಿ ಮಾರುಕಟ್ಟೆಯಲ್ಲಿ ಮುನ್ನಡೆ ಸಾಧಿಸಲಿವೆ," ಎಂದು ಅಭಿಪ್ರಾಯಪಟ್ಟಿದ್ದಾರೆ.

### ವರದಿಯ ಹೈಲೈಟ್ಸ್

- ಭಾರತದ ಶೇ. 98ರಷ್ಟು ಇಂಟರ್‌ನೆಟ್ ಬಳಕೆದಾರರು ಭಾರತೀಯ ಭಾಷೆಗಳಲ್ಲಿಯೇ ಡಿಜಿಟಲ್ ಕಂಟೆಂಟ್ ಅನ್ನು ಬಳಸುತ್ತಿದ್ದಾರೆ.
- ಇಂಗ್ಲೀಷ್‌ಗೆ ಹೋಲಿಸಿದರೆ ಸ್ಥಳೀಯ ಭಾಷೆಗಳಲ್ಲಿ ಧ್ವನಿ ಆಧಾರಿತ ಹುಡುಕಾಟಗಳು ಶೇ.156 ರಷ್ಟು ಹೆಚ್ಚಾಗಿವೆ. ಹೀಗಾಗಿ, ಭಾರತೀಯ ಭಾಷೆಗಳಿಗೆ ಆದ್ಯತೆ ನೀಡುವ ಇ-ಕಾಮರ್ಸ್ ವೇದಿಕೆಗಳ ಅಗತ್ಯ ದಿನದಿಂದ ದಿನಕ್ಕೆ ಹೆಚ್ಚುತ್ತಿದೆ.
- ದೇಶದ ಎರಡನೇ ಮತ್ತು ಮೂರನೇ ಹಂತದ ನಗರಗಳಲ್ಲಿಯೇ ಶೇ.60ಕ್ಕೂ ಹೆಚ್ಚು ಆನ್‌ಲೈನ್ ಗ್ರಾಹಕರು ನೆಲೆಸಿದ್ದಾರೆ.
- ಗ್ರಾಮೀಣ ಪ್ರದೇಶಗಳಲ್ಲಿ 488 ದಶಲಕ್ಷ ಸಕ್ರಿಯ ಇಂಟರ್‌ನೆಟ್ ಬಳಕೆದಾರರಿದ್ದು, ಭಾರತದ ಡಿಜಿಟಲ್ ವಾಣಿಜ್ಯ ಬೆಳವಣಿಗೆಯಲ್ಲಿ ಈ ಪ್ರದೇಶಗಳ ಪಾತ್ರ ನಿರ್ಣಾಯಕವಾಗಿದೆ.

...ನೇ ಪುಟದಿಂದ

ದುಡಿಮೆಯನ್ನು ಕಿತ್ತುಕೊಳ್ಳಲು ಹೊಂಚುಹಾಕುವ ಈ ವ್ಯವಸ್ಥೆಯಲ್ಲಿ ಆರ್ಥಿಕ ಶಿಸ್ತು ರೂಪಿಸಿಕೊಳ್ಳುವುದು ಸುಲಭದ ಮಾತಲ್ಲ. ಆರ್ಥಿಕ ಶಿಸ್ತು ನಾವು ಮಾತ್ರ ರೂಡಿಸಿಕೊಳ್ಳುವುದಲ್ಲ. ಅದಕ್ಕೆ ಈ ಸಮಾಜದ ಕೊಳ್ಳುಬಾಕ ವ್ಯಾಖ್ಯಾನವನ್ನು ದಾಟಬೇಕು, ಅದರ ಮೂಲಕ ನಮ್ಮನ್ನು ಸಮಾಜದ ಐಡೆಂಟಿಟಿ ಕೊಡುವ ವ್ಯಸನವನ್ನು ದಾಟಬೇಕು. ಆದರೆ ಈ ಡಿಜಿಟಲ್ ಇಂಡಿಯಾ ಕಲ್ಪನೆಗೆ ಆ ಶಿಸ್ತು ಖಂಡಿತವಾಗಿ ಇಲ್ಲ. ಕೈಯಿಂದ ದುಡ್ಡು ಸುಲಭವಾಗಿ ಜಾರಿ ಹೋಗಬೇಕು, ಜನರ ಬಳಿ ತಾವು ದುಡಿದದ್ದು ಉಳಿಸಬಾರದು ಎಂದು ಸರ್ಕಾರವೇ ನೀತಿಗಳನ್ನು ಡಿಜಿಟಲ್ ಹೆಸರಿನಲ್ಲೊ, ಕ್ಯಾಶ್‌ಲೆಸ್ ಹೆಸರಿನಲ್ಲೋ ರೂಪಿಸುತ್ತಿರುವಾಗ ಈ ದೇಶದ ಬಡ ಪ್ರಜೆ ತಾನೇ ಏನು ಮಾಡಲು ಸಾಧ್ಯ?

### ಯುಪಿಐಗೆ ಯಾರ ಒಡೆತನ...?

- **ಫೋನ್ ಪೆ** – ಭಾರತದ ಫಿನ್‌ಟೆಕ್ ಕಂಪನಿ. ಆದರೆ ಇದರ ಪ್ರಮುಖ ಹೂಡಿಕೆದಾರರಲ್ಲಿ ಅಮೆರಿಕದ Walmart ಇದೆ.
- **ಗೂಗಲ್ ಪೇ** – ಐ.ಟಿ. ದೈತ್ಯ ಗೂಗಲ್. ಇದು ಅಮೆರಿಕದ Alphabetಗೆ ಸೇರಿದೆ.
- **ಪೇಟಿಎಂ** – One97 Communications ಎಂಬ ಭಾರತೀಯ ಕಂಪನಿಯಾಗಿದೆ.
- **ವಾಟ್ಸ್ ಅಪ್ ಪೇ** – ಅಮೆರಿಕದ ಮೆಟಾದ ಒಂದು ಅಂಗಸಂಸ್ಥೆ.
- **ಅಮೇಜಾನ್ ಪೇ** – ಅಮೆರಿಕದ Amazon ಸಂಸ್ಥೆಯಾಗಿದೆ.

# ಸರ್ ಎಂ. ವಿಶ್ವೇಶ್ವರಯ್ಯ ಸಹಕಾರ ಬ್ಯಾಂಕ ನಿಯಮಿತ ಕಲಬುರಗಿ ಬ್ಯಾಂಕು ನಡೆದುಬಂದ ದಾರಿ



ಶರಣಬಸಪ್ಪ ದರ್ಶನಾಪುರ
ಅಧ್ಯಕ್ಷರು



ಜೈರಾಜ ಬಿ. ಪಾಟೀಲ ಓಕಳಿ
ಉಪಾಧ್ಯಕ್ಷರು



ಎಸ್.ಬಿ. ಪುಣ್ಯಶೆಟ್ಟಿ
ಮುಖ್ಯಕಾರ್ಯನಿರ್ವಹಣಾಧಿಕಾರಿ

ಕಲಬುರಗಿ ನಗರದಲ್ಲಿರುವ ಸಮಾನ ಮನಸ್ಕ ಇಂಜಿನೀಯರರು 1996ರ ಜೂನ್ ತಿಂಗಳಲ್ಲಿ ದೇಶ ಕಂಡ ಶ್ರೇಷ್ಠ ಇಂಜಿನೀಯರ್, ದಕ್ಷ ಆಡಳಿತಗಾರ ಕನ್ನಡನಾಡಿನ ಹೆಮ್ಮೆಯ ಪುತ್ರ ಭಾರತ ರತ್ನ ಸರ್ ಎಂ. ವಿಶ್ವೇಶ್ವರಯ್ಯನವರ ಗೌರವಾರ್ಥವಾಗಿ ಸಹಕಾರ ಸಂಘ ಸ್ಥಾಪಿಸುವ ಉದ್ದೇಶದಿಂದ ಸಭೆ ಸೇರಿ ಚರ್ಚಿಸಿದರು. ಸಭೆಯಲ್ಲಿ ಹಾಜರಿದ್ದ ಹಿರಿಯ ಇಂಜಿನೀಯರ್ ಆದಂತ ಶ್ರೀ ನೀಲಕಂಠಪ್ಪ ಕಂಠಿಯವರು ಸಹಕಾರ ಸಂಘ ಸ್ಥಾಪಿಸುವುದಕ್ಕಿಂತ ಪಟ್ಟಣ ಸಹಕಾರ ಬ್ಯಾಂಕ್ ಸ್ಥಾಪಿಸಿದರೆ ನಗರದ ಜನರಿಗೆ ಬ್ಯಾಂಕಿಂಗ್ ವ್ಯವಹಾರ ಮಾಡಲು ಅನುಕೂಲವಾಗುವುದೆಂದು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಿದರು. ಈ ವಿಷಯದ ಬಗ್ಗೆ ಸಭೆಯಲ್ಲಿ ಸುದೀರ್ಘ ಚರ್ಚೆ ನಡೆಸಿ ಒಮ್ಮತದಿಂದ ಸರ್ ಎಂ. ವಿಶ್ವೇಶ್ವರಯ್ಯನವರ ಹೆಸರಿನಲ್ಲಿ ಪಟ್ಟಣ ಸಹಕಾರ ಬ್ಯಾಂಕ್ ಸ್ಥಾಪಿಸಲು ನಿರ್ಧರಿಸಲಾಯಿತು.

ದಿನಾಂಕ : 20.03.1997 ರಂದು ಸಹಕಾರ ಸಂಘಗಳ ಸಹಾಯಕ ನಿಬಂಧಕರು ಕಲಬುರಗಿ ಇವರಿಂದ ಸರ್ ಎಂ. ವಿಶ್ವೇಶ್ವರಯ್ಯ ಸಹಕಾರ ಬ್ಯಾಂಕ ನಿಯಮಿತ, ಕಲಬುರಗಿ ಎಂದು ನೋಂದಣಿಯಾಯಿತು. ರಿಝರ್ವ ಬ್ಯಾಂಕ ಆಫ್ ಇಂಡಿಯಾದಿಂದ ಬ್ಯಾಂಕಿಂಗ್ ಪರವಾನಿಗೆಯನ್ನು ದಿನಾಂಕ : 03.10.1997 ರಂದು ಪಡೆದುಕೊಂಡು ಮುಂದೆ ಬ್ಯಾಂಕಿಂಗ್ ವ್ಯವಹಾರ ಪ್ರಾರಂಭ ಮಾಡುವ ಉದ್ದೇಶದಿಂದ ನಗರದ ಸೂಪರ್ ಮಾರ್ಕೆಟ್ ಏರಿಯಾದಲ್ಲಿ 1ನೇ ಮಹಡಿಯ ಸುಮಾರು 1200 ಚದರ ಅಡಿ ವಿಸ್ತೀರ್ಣ ಕಟ್ಟಡವನ್ನು ಬಾಡಿಗೆಗೆ ಪಡೆದುಕೊಂಡು ದಿನಾಂಕ : 01.01.1998ರಂದು ರೂ. 16,72,000.00 ಶೇರು ಬಂಡವಾಳದೊಂದಿಗೆ ಬ್ಯಾಂಕಿನ ಕಾರ್ಯಚಟುವಟಿಕೆ ಪ್ರಾರಂಭಿಸಿತು.

ಬ್ಯಾಂಕಿನ ಆಡಳಿತ ಮಂಡಳಿಯವರು ಹಾಗೂ ಸಿಬ್ಬಂದಿ ವರ್ಗದವರು ಬ್ಯಾಂಕಿನ ಸದಸ್ಯರು ಮತ್ತು ಸದಸ್ಯೇತರರಿಂದ ಕಲಬುರಗಿ ನಗರ ಹಾಗೂ ಜಿಲ್ಲೆಯಾದ್ಯಂತ ಠೇವಣಿ ಸಂಗ್ರಹ ಅಭಿಯಾನ ನಡೆಸಿ ಗ್ರಾಹಕರಿಗೆ ಅನ್ಯ ಬ್ಯಾಂಕುಗಳಿಗಿಂತ ಹೆಚ್ಚು ಬಡ್ಡಿ ಬರುವಂತಹ ವಿವಿಧ ತರಹದ ಆಕರ್ಷಕ ಠೇವುಗಳನ್ನು ಪ್ರಚಾರಪಡಿಸಿ




| Bank Position as on 31-03-2026 | |
|---|---|
| Share Member | 4084 |
| Share Amount | Rs. 603.69 Lakhs |
| Reserves | Rs. 2990.34 Lakhs |
| Deposits | Rs. 17107.99 Lakhs |
| Investments | Rs. 8808.60 Lakhs |
| Loans and Advances | Rs. 11232.11 Lakhs |
| Gross NPA % | 3.49 % |
| Net NPA % | 0.00 % |
| CRAR % | 18.19 % |
| Working Capital | Rs. 21300.79 Lakhs |
| Profit | Rs. 315.35 Lakhs |

9ನೇ ಪುಟಕ್ಕೆ

# ಹೂಡಿಕೆಗೂ ಆರ್‌ಡಿ /ಎಫ್‌ಡಿ ಯಾವುದರಲ್ಲಿ ಲಾಭ ಹೆಚ್ಚು?

ನಿಮ್ಮಲ್ಲಿರುವ ಹಣ ಹೂಡಿಕೆ ಮಾಡಬೇಕು ಅಂತ ಯೋಚಿಸಿದಾಗ ಮೊದಲು ನೆನಪಿಗೆ ಬರೋದು ಆರ್‌ಡಿ ಮತ್ತು ಎಫ್‌ಡಿ. ಈ ಎರಡೂ ಬ್ಯಾಂಕುಗಳು ನೀಡುವ ಸುರಕ್ಷಿತ ಹೂಡಿಕೆ ಆಯ್ಕೆಗಳು. ಅದರಂತೆ ಎರಡರಲ್ಲೂ ರಿಸ್ಕ್ ಕಡಿಮೆ, ಗ್ಯಾರಂಟಿ ರಿಟರ್ನ್ ಸಿಗೋದ್ರಿಂದ ಮಧ್ಯಮ ವರ್ಗದವರ ಮೊದಲ ಆಯ್ಕೆ ಇದೇ. ಹಾಗಾದರೆ ಯಾವುದು ಗೊತ್ತಾ?

### ಎಫ್‌ಡಿ ಅಂದ್ರೆ ಏನು?

ಫಿಕ್ಸೆಡ್ ಡೆಪಾಸಿಟ್ ಅಂದ್ರೆ ಒಂದು ಮೊತ್ತದ ಹಣವನ್ನು ನಿರ್ದಿಷ್ಟ ಅವಧಿಗೆ ಬ್ಯಾಂಕಿನಲ್ಲಿ ಠೇವಣಿ ಇಡುವುದು. ಉದಾಹರಣೆಗೆ 1 ಲಕ್ಷ ರೂಪಾಯಿ 1 ವರ್ಷಕ್ಕೆ ಫಿಕ್ಸೆಡ್ ಡೆಪಾಸಿಟ್ ಮಾಡಿದರೆ, ಅವಧಿ ಮುಗಿದ ಮೇಲೆ ಅಸಲು ಅದರೊಂದಿಗೆ ಬಡ್ಡಿ ಒಟ್ಟಿಗೆ ಸಿಗುತ್ತೆ. ಇನ್ನು ಇದರ ಬಡ್ಡಿ ದರ ಸಾಮಾನ್ಯವಾಗಿ ಶೇ. 6 ರಿಂದ ಶೇ. 7.5 ರವರೆಗೆ ಇರುತ್ತೆ. ಜೊತೆಗೆ ಹಿರಿಯ ನಾಗರಿಕರಿಗೆ ಶೇ.0.5 ಹೆಚ್ಚುವರಿ ಬಡ್ಡಿ ಸಿಗುತ್ತೆ. ಏತನ್ಮಧ್ಯೆ ತುರ್ತು ಸಂದರ್ಭ ಬಂದ್ರೆ ನಿಗದಿತ ಅವಧಿಗೂ ಮುಂಚೆನೇ ಹಣ ವಾಪಸ್ ತೆಗೆಯಬಹುದು, ಆದ್ರೆ ದಂಡ ಬೀಳುತ್ತೆ.

### ಆರ್‌ಡಿ ಅಂದ್ರೆ ಏನು?

ರಿಕರಿಂಗ್ ಡೆಪಾಸಿಟ್ ಅಂದ್ರೆ ಪ್ರತಿ ತಿಂಗಳು ಒಂದು ನಿರ್ದಿಷ್ಟ ಮೊತ್ತದ ಹಣವನ್ನು ಬ್ಯಾಂಕಿನಲ್ಲಿ ಜಮಾ ಮಾಡುವುದು. ಉದಾಹರಣೆಗೆ ತಿಂಗಳಿಗೆ 5000 ರೂಪಾಯಿ 2 ವರ್ಷ ಆರ್‌ಡಿ ಮಾಡಿದರೆ, ಅವಧಿ ಮುಗಿದ ಮೇಲೆ ಒಟ್ಟು ಹಣ ಸೇರಿ ಬಡ್ಡಿ ಸಿಗುತ್ತೆ. ಇನ್ನು, ಇದರ ಆರ್‌ಡಿ ಬಡ್ಡಿ ದರವೂ ಎಪ್‌ಡಿಗೆ ಸಮಾನವಾಗಿರುತ್ತದೆ.

**ಉದಾಹರಣೆಗೆ:** ನೀವು ರೂ.12,000 ಹಣವನ್ನು ವರ್ಷದ RD ಇಟ್ಟರೆ, ಮೊದಲ ತಿಂಗಳ ರೂ.1,000 ಗೆ ಮಾತ್ರ 12 ತಿಂಗಳ ಬಡ್ಡಿ ಸಿಗುತ್ತದೆ. ಕೊನೆಯ ತಿಂಗಳು ಕಟ್ಟುವ ರೂ.1,000 ಗೆ ಕೇವಲ 1 ತಿಂಗಳ ಬಡ್ಡಿ ಸಿಗುತ್ತದೆ. ಆದ್ದರಿಂದ ಬಡ್ಡಿ ದರ ಒಂದೇ ಆಗಿದ್ದರೂ, ಎಫ್‌ಡಿಗೆ ಹೋಲಿಸಿದರೆ ಆರ್‌ಡಿಯಲ್ಲಿ ಸಿಗುವ ಒಟ್ಟು ಬಡ್ಡಿಯ ಮೊತ್ತ ಕಡಿಮೆಯಿರುತ್ತದೆ. ಹಾಗಾಗಿ, ಉಳಿತಾಯದ ಅಭ್ಯಾಸ ಇಲ್ಲದವರಿಗೆ ಆರ್‌ಡಿ ತುಂಬಾ ಒಳ್ಳೆಯದು.

### ಯಾವುದರಲ್ಲಿ ಹೆಚ್ಚು ಲಾಭ?

- ಒಟ್ಟು ಹಣ ನಿಮ್ಮಲ್ಲಿ ಇದ್ದರೆ ಎಫ್‌ಡಿ ಉತ್ತಮ. ಕಾರಣ ಒಟ್ಟಿಗೆ ದೊಡ್ಡ ಮೊತ್ತ ಠೇವಣಿ ಇಡಬಹುದು. ಅದರಲ್ಲೂ, ಒಟ್ಟಿಗೆ ಹಣ ಇಡುವುದರಿಂದ ಬಡ್ಡಿ ಜಾಸ್ತಿ ಸಿಗುತ್ತೆ.
- ತಿಂಗಳ ಉಳಿತಾಯ ಮಾಡುವವರಿಗೆ ಆರ್‌ಡಿ ಉತ್ತಮ. ಕಾರಣ ಪ್ರತಿ ತಿಂಗಳು ಸಣ್ಣ ಸಣ್ಣ ಮೊತ್ತ ಕಟ್ಟಿ ದೊಡ್ಡ ಮೊತ್ತ ಕೂಡಿಸಬಹುದು.
- ಬಡ್ಡಿ ದರ ಎರಡಕ್ಕೂ ಬಹುತೇಕ ಒಂದೇ ಇರುತ್ತೆ. ಆದ್ರೆ ಎಫ್‌ಡಿ ನಲ್ಲಿ ಬಡ್ಡಿಯನ್ನು ತಿಂಗಳು ಅಥವಾ ಮೂರು ತಿಂಗಳಿಗೊಮ್ಮೆ ಹಣ ತೆಗೆಯುವ ಆಯ್ಕೆ ಇರುತ್ತೆ. ಆದರೆ, ಆರ್‌ಡಿಯಲ್ಲಿ ಅವಧಿ ಮುಗಿದ ಮೇಲಷ್ಟೇ ಸಿಗುತ್ತೆ.
- ತೆರಿಗೆ ವಿಚಾರದಲ್ಲೂ ಎರಡಕ್ಕೂ TDS ಅನ್ವಯ ಆಗುತ್ತೆ. 5 ವರ್ಷದ ಟ್ಯಾಕ್ಸ್ ಸೇವಿಂಗ್ FD ಗೆ 80C ಪ್ರಯೋಜನ ಇದೆ.
- **ಅವಧಿ :** ಎಫ್‌ಡಿಯಲ್ಲಿ ಹಣದ ಹೂಡಿಕೆಯನ್ನು ಕನಿಷ್ಠ 7 ದಿನಗಳಿಂದ 10 ವರ್ಷಗಳವರೆಗೆ ಮಾಡಬಹುದು. ಆರ್‌ಡಿಯಲ್ಲಿ ಕನಿಷ್ಠ 6 ತಿಂಗಳಿಂದ 10 ವರ್ಷಗಳವರೆಗೆ ಮಾಡಬಹುದು.

ಒಟ್ಟಾರೆಯಾಗಿ, ನಿಮ್ಮ ಬಳಿ ಒಟ್ಟಿಗೆ ಹಣ ಇದ್ದರೆ ಎಫ್‌ಡಿ ಆಯ್ಕೆ ಮಾಡಿ. ಸಂಬಳದಿಂದ ಪ್ರತಿ ತಿಂಗಳು ಉಳಿಸಲು ಬಯಸಿದರೆ ಆರ್‌ಡಿ ಸೂಕ್ತ. ಅದರಲ್ಲೂ, ರಿಸ್ಕ್ ಇಲ್ಲದ, ಗ್ಯಾರಂಟಿ ರಿಟರ್ನ್ ಬಯಸುವವರಿಗೆ ಎರಡೂ ಒಳ್ಳೆಯ ಆಯ್ಕೆ. ಏತನ್ಮಧ್ಯೆ ಹೂಡಿಕೆ ಮಾಡುವ ಮುನ್ನ ಬ್ಯಾಂಕಿನ ಬಡ್ಡಿ ದರ, ಅವಧಿ ಮತ್ತು ನಿಮ್ಮ ಗುರಿ ನೋಡಿ ನಿರ್ಧಾರ ಮಾಡಿ.

೮ನೇ ಪುಟದಿಂದ

ಠೇವಣಿ ಸಂಗ್ರಹ ಹೆಚ್ಚಿಸಿಕೊಂಡಿತು. ತದನಂತರ ಬ್ಯಾಂಕಿನ ಸದಸ್ಯರುಗಳಿಗೆ ವಿವಿಧ ತರಹದ ಸಾಲಗಳನ್ನು ವಿತರಣೆ ಮಾಡಿ. ಬ್ಯಾಂಕು ತನ್ನ ಕಾರ್ಯಚಟುವಟಿಕೆಯನ್ನು ವಿಸ್ತರಿಸಿಕೊಂಡು ಗ್ರಾಹಕರಿಗೆ ಉತ್ತಮ ಸೇವೆಯನ್ನು ನೀಡುತ್ತಾ ದಿನದಿಂದ ದಿನಕ್ಕೆ ಪ್ರಗತಿ ಹೊಂದುತ್ತ ಸಾಗಿತು. ಮೊದಲೆರಡು ವರ್ಷಗಳವರೆಗೆ ಯಾವುದೇ ಲಾಭ ಹೊಂದದೆ ಸನ್ 1999–2000ನೇ ಆರ್ಥಿಕ ವರ್ಷದಲ್ಲಿ ಲಾಭ ಗಳಿಸಿ ಬ್ಯಾಂಕಿನ ಸದಸ್ಯರುಗಳಿಗೆ ಮೊದಲ ಬಾರಿಗೆ ಶೇಕಡಾ 10 ಪ್ರತಿಶತ ಲಾಭಾಂಶ ವಿತರಿಸಿ ಸದಸ್ಯರುಗಳಿಂದ ಮೆಚ್ಚುಗೆಗೆ ಪಾತ್ರವಾಯಿತು.

ಹೀಗೆ 2007–2008ನೇ ವರ್ಷದವರೆಗೆ ಬ್ಯಾಂಕು ತನ್ನ ವ್ಯವಹಾರವನ್ನು ಬಾಡಿಗೆ ಕಟ್ಟಡದಲ್ಲಿಯೇ ನಡೆಸಿಕೊಂಡು ಬಂದಿತು. ಮುಂದೆ ಆಡಳಿತ ಮಂಡಳಿಯವರು ಬ್ಯಾಂಕಿನ ವ್ಯವಹಾರ ವರ್ಷದಿಂದ ವರ್ಷಕ್ಕೆ ಹೆಚ್ಚಾಗುತ್ತಿರುವುದನ್ನು ಕಂಡು ಬ್ಯಾಂಕು ತನ್ನ ಸ್ವಂತ ಕಟ್ಟಡ ಹೊಂದಲು ಸೂಕ್ತ ಸಮಯವೆಂದು ತಿಳಿದು 2007ನೇ ಇಸ್ವಿಯಲ್ಲಿ ನಗರದ ಸೂಪರ್ ಮಾರ್ಕೆಟ್‌ನ ಗಂಪಾ ಕಾಂಪ್ಲೆಕ್ಸ್‌ನಲ್ಲಿರುವ 2ನೇ ಮಹಡಿಯ ಸುಮಾರು 2 ಸಾವಿರ ಚದರ ಅಡಿ ವಿಸ್ತೀರ್ಣದ ಜಾಗವನ್ನು ಖರೀದಿಸಿತು.

ಸಂಪೂರ್ಣ ಹವಾನಿಯಂತ್ರಣದ ನವೀನ ರೀತಿಯ ಒಳಾಂಗಣ ವಿನ್ಯಾಸಗೊಳಿಸಿ, ಗ್ರಾಹಕರ ಹೆಚ್ಚಿನ ಅನುಕೂಲಕ್ಕಾಗಿ ಬ್ಯಾಂಕ್ ವ್ಯವಹಾರವನ್ನು ಸಂಪೂರ್ಣ ಗಣಕೀಕೃತಗೊಳಿಸಿ, ತನ್ನ ಗ್ರಾಹಕರಿಗೆ ಲಾಕರ್ ಸೌಲಭ್ಯದೊಂದಿಗೆ ದಿನಾಂಕ : 01.01.2008 ರಂದು ಹೊಸ ಸುಸಜ್ಜಿತವಾದ ಸ್ವಂತ ಕಟ್ಟಡದಲ್ಲಿ ಕಾರ್ಯಾರಂಭ ಪ್ರಾರಂಭಿಸಿತು. 1999–2000ದಿಂದ 2004–2005ರ ವರೆಗೆ ಸದಸ್ಯರುಗಳಿಗೆ ಶೇಕಡಾ 10 ಪ್ರತಿಶತ ಲಾಭಾಂಶ ವಿತರಿಸುತ್ತ ಬಂದ ಬ್ಯಾಂಕು ಸನ್ 2006–2007ನೇ ಸಾಲಿನಿಂದ ಪ್ರಸಕ್ತ ಸಾಲಿನವರೆಗೆ ಶೇಕಡಾ 15 ಪ್ರತಿಶತ ಲಾಭಾಂಶ ವಿತರಿಸಿದೆ. ಸತತ 29 ವರ್ಷಗಳಿಂದ ಗ್ರಾಹಕರಿಗೆ ಉತ್ತಮ ಸೇವೆ ಒದಗಿಸುತ್ತ ಬಂದಿದ್ದು ನಗರದಲ್ಲಿಯೇ ಅತ್ಯುತ್ತಮ ಪಟ್ಟಣ ಸಹಕಾರ ಬ್ಯಾಂಕ್ ಎಂದು ಕರೆಯಿಸಿಕೊಂಡಿದೆ.

# ರಿಸರ್ವ್ ಬ್ಯಾಂಕಿನ ನೇರ ಹೊಣೆಗಾರಿಕೆಯ ಡಿಜಿಟಲ್ ರೂಪಾಯಿ ಚಲಾವಣೆಗೆ ಸುರಕ್ಷಿತ ಹಾಗೂ ಸುಲಭ

ಭಾರತೀಯ ರಿಸರ್ವ್ ಬ್ಯಾಂಕ್ ರೂಪಿಸಿರುವ ಈ ಡಿಜಿಟಲ್ ರೂಪಾಯಿ ಅಥವಾ e-ರುಪೀ ವ್ಯವಸ್ಥೆಯು ಮುಂದೆ ಇಂಟರ್‌ನೆಟ್ ಇಲ್ಲದೆಯೇ ಹಣ ವರ್ಗಾವಣೆಗೆ ಅನುವು ಮಾಡಿಕೊಡಲಿದೆ. ಈಗಾಗಲೇ ಪ್ರಾಯೋಗಿಕವಾಗಿ ಡಿಜಿಟಲ್ ರೂಪಾಯಿ ಸೇವೆ ಆರಂಭವಾಗಿದೆ.

ಕಳೆದ ಆರು ಹಣಕಾಸು ವರ್ಷಗಳಲ್ಲಿ ಭಾರತೀಯರು 65 ಸಾವಿರ ಕೋಟಿ ಬಾರಿ ಯುಪಿಐ (ಯುನಿಫೈಡ್ ಪೇಮೆಂಟ್ ಇಂಟರ್‌ಫೇಸ್), ಸರಳವಾಗಿ ಹೇಳಬಹುದಾದರೆ, 'ಆನ್ಲೈನ್ ಪೇಮೆಂಟ್' ವ್ಯವಸ್ಥೆ ಬಳಸಿ ಹಣಕಾಸು ವಹಿವಾಟು ನಡೆಸಿದ್ದು, 12 ಸಾವಿರ ಟ್ರಿಲಿಯನ್ ರೂಪಾಯಿ ವ್ಯವಹಾರ ನಡೆಸಿದ್ದಾರೆ ಎಂದು ಕೇಂದ್ರ ಸರ್ಕಾರ ಇತ್ತೀಚೆಗೆ ತಿಳಿಸಿತ್ತು. ಕೈಯಲ್ಲಿ ಅಥವಾ ಸಾಂಪ್ರದಾಯಿಕ ಪರ್ಸ್‌ನಲ್ಲಿ ನೋಟುಗಳಿಲ್ಲದೆಯೇ, ಡಿಜಿಟಲ್ ಪಾವತಿ ಮೂಲಕ ಈ ವಹಿವಾಟು ನಡೆಸಿದೆ.

ಯುಪಿಐ ವ್ಯವಸ್ಥೆಯಲ್ಲಿ ಗೂಗಲ್ ಪೇ, ಭೀಮ್ ಆ್ಯಪ್, ಫೋನ್ ಪೇ, ಪೇಟಿಎಂ ಮುಂತಾದ ಅದೆಷ್ಟೋ ಡಿಜಿಟಲ್ ವ್ಯಾಲೆಟ್‌ಗಳ (ಡಿಜಿಟಲ್ ಪರ್ಸ್ ಅಂತ ಹೇಳಬಹುದು) ಮೂಲಕ ಈ ವಹಿವಾಟು ನಡೆದಿದ್ದು, ಜನರು ನಗದು ಹಣವನ್ನು ಕೈಯಲ್ಲಿರಿಸಿಕೊಳ್ಳುವುದು ಕಡಿಮೆಯಾಗುತ್ತಿದೆ. ಈ ಡಿಜಿಟಲ್ ಕ್ರಾಂತಿಗೆ ಮತ್ತೊಂದು ಸೇರ್ಪಡೆ ಇ–ರುಪೀ ಅಥವಾ ಡಿಜಿಟಲ್ ರೂಪಾಯಿ.

### ಏನಿದು ಡಿಜಿಟಲ್ ರೂಪಾಯಿ ಅಥವಾ e-ರುಪೀ?

ಡಿಜಿಟಲ್ ರೂಪಾಯಿ ಅಥವಾ ಇ– ರುಪೀ ಎಂಬುದು ಭಾರತದ ಕೇಂದ್ರೀಯ ಬ್ಯಾಂಕಿನ ಡಿಜಿಟಲ್ ಕರೆನ್ಸಿ (ಸೆಂಟ್ರಲ್ ಬ್ಯಾಂಕ್ ಡಿಜಿಟಲ್ ಕರೆನ್ಸಿ – CBDC). ಸರಳವಾಗಿ ಹೇಳುವುದಾದರೆ ನಮ್ಮ ಪರ್ಸಿನಲ್ಲಿ ಇರುವ ನೋಟುಗಳ ಬದಲಾಗಿ, ನಮ್ಮದೇ ಆನ್ಲೈನ್ ಪರ್ಸ್‌ನಲ್ಲಿ ಇರಿಸುವ ಹಣ. ಜೇಬಿನಲ್ಲಿರುವ ಹಣಕ್ಕೆ ಭೌತಿಕ ರೂಪ ಇದೆ, ಈ ಡಿಜಿಟಲ್ ಹಣಕ್ಕೆ ತಾಂತ್ರಿಕ ರೂಪವಷ್ಟೇ ಇರುವುದು. ಇದನ್ನು ಬಳಕೆದಾರರದ್ದೇ ಆದ ಡಿಜಿಟಲ್ ಪರ್ಸಿನಲ್ಲಿ ಇರಿಸಿ, ಬೇಕಾದಾಗ ಎಷ್ಟು ಬೇಕೋ ಅಷ್ಟು ಹಣ ವರ್ಗಾಯಿಸಬಹುದು.

ಈ ಡಿಜಿಟಲ್ ಪರ್ಸಿನಲ್ಲಿನ ಹಣವನ್ನು ನಮ್ಮ ಖಾತೆಯಿಂದ ಸೇರಿಸಬಹುದು; ಬೇರೆಯವರೂ ಈ ಪರ್ಸಿಗೆ ಹಣ ಹಾಕಬಹುದು. ಆದರೆ ಗಮನಿಸಿ, ಈ ಪರ್ಸಿನಲ್ಲಿರುವ ಹಣಕ್ಕೆ ಯಾವುದೇ ಬಡ್ಡಿ ದೊರೆಯುವುದಿಲ್ಲ – ನಮ್ಮ ಜೇಬಿನಲ್ಲಿರುವ ಹಣದಂತೆಯೇ. ಡಿಜಿಟಲ್ ವ್ಯಾಲೆಟ್ ತೆರೆದು ನೋಡಿದರೆ, ಅದರಲ್ಲಿ ನಾವು ಹಾಕಿದ ಹಣದ ಮೊತ್ತವು, ರೂ. 500, 200, 100, 20, 10, 5,




1 ಹೀಗೆ ನೋಟುಗಳು ಹಾಗೂ ನಾಣ್ಯಗಳ ರೂಪದಲ್ಲಿ ಗೋಚರಿಸುತ್ತದೆ.

### ಇ–ರೂಪಾಯಿ ಹೇಗೆ ಕೆಲಸ ಮಾಡುತ್ತದೆ?

ಬಹುತೇಕ ಈಗಿನ ಯುಪಿಐ (ಗೂಗಲ್–ಪೇ–ಫೋನ್–ಪೇ) ಮಾದರಿಯಲ್ಲೇ, ಒಂದು ಆ್ಯಪ್ ಮೂಲಕ ಇದು ಕೆಲಸ ಮಾಡುತ್ತದೆ. ಪ್ರಾಯೋಗಿಕವಾಗಿ ಇದು ಚಾಲ್ತಿಗೆ ಬಂದಿದ್ದು, ಪ್ರಮುಖ ಬ್ಯಾಂಕುಗಳು ಆಂಡ್ರಾಯ್ಡ್ ಹಾಗೂ ಐಒಎಸ್ ಫೋನ್‌ಗಳಿಗಾಗಿ ಪ್ರತ್ಯೇಕ ಆ್ಯಪ್ (ಡಿಜಿಟಲ್ ಪರ್ಸ್) ರೂಪಿಸಿವೆ. ಯಾವುದೇ ದಿನಸಿ ಸಾಮಗ್ರಿ, ತರಕಾರಿ ಖರೀದಿಗೆ ಅಥವಾ ಅನ್ಯ ಸೇವೆಗೆ ಇದರ ಮೂಲಕ ಹಣ ವರ್ಗಾಯಿಸಬಹುದು. ಕ್ಯುಆರ್ ಕೋಡ್ ಸ್ಕ್ಯಾನ್ ಮಾಡುವ ಮೂಲಕ ಅಥವಾ ನಿರ್ದಿಷ್ಟ ಮೊಬೈಲ್ ಸಂಖ್ಯೆಗೆ ಹಾಗೂ ಈ ಸಂಖ್ಯೆಯೂ ಇ–ರೂಪಾಯಿ ಬಳಕೆಗೆ ನೋಂದಾಯಿಸಿಕೊಂಡಿರಬೇಕು. ಹಣ ವರ್ಗಾಯಿಸಬಹುದು. ಡಿಜಿಟಲ್ ಪರ್ಸ್‌ನಲ್ಲಿ ಸಂಗ್ರಹವಾಗುವ ಹೆಚ್ಚುವರಿ ಹಣವನ್ನು ಅದಕ್ಕೆ ಲಿಂಕ್ ಆಗಿರುವ ಬ್ಯಾಂಕ್ ಉಳಿತಾಯ ಖಾತೆಗೆ ವರ್ಗಾಯಿಸಬಹುದು. ಸಂಬಂಧಪಟ್ಟ ವ್ಯಾಪಾರಿಗಳು ಕೂಡ ಇ–ರುಪೀ ವ್ಯಾಲೆಟ್ ಅಳವಡಿಸಿಕೊಂಡಲ್ಲಿ, ಎಲ್ಲ ವಹಿವಾಟುಗಳೂ ಸರಾಗವಾಗಿ ಆಗಲಿವೆ. ಸದ್ಯ ಇದು ಪೈಲಟ್ ಯೋಜನೆಯಾಗಿರುವುದರಿಂದ ಬೆಂಗಳೂರು ಸಹಿತ

ಪ್ರಮುಖ ನಗರಗಳಲ್ಲಿ ಕೆಲಸ ಮಾಡುತ್ತಿದೆ. ವ್ಯಾಪ್ತಿ, ವಿಸ್ತಾರ ಇನ್ನಷ್ಟೇ ಆಗಬೇಕಿದೆ.

### ಗೂಗಲ್ ಪೇ, ಫೋನ್ ಪೇಗಿಂತ ಇ-ರೂಪಾಯಿ ಹೇಗೆ ಭಿನ್ನ?

ಗೂಗಲ್ ಪೇ, ಫೋನ್ ಪೇ ಆ್ಯಪ್‌ಗಳು ಎರಡು ಬ್ಯಾಂಕುಗಳ ನಡುವೆ ಮಧ್ಯವರ್ತಿ ರೂಪದಲ್ಲಿ ಕೆಲಸ ಮಾಡುತ್ತವೆ. ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ ರೂಪಿಸಿದ ಈ ಡಿಜಿಟಲ್ ರೂಪಾಯಿ ವ್ಯವಸ್ಥೆಯಲ್ಲಿ ಎರಡು ಬ್ಯಾಂಕುಗಳು ಪರಸ್ಪರ ನೇರವಾಗಿ ಸಂವಹನ ಮಾಡಿಕೊಳ್ಳುತ್ತವೆ. ಯುಪಿಐ ಅಥವಾ ಬ್ಯಾಂಕಿನ ಸರ್ವರ್ ಕೈಕೊಟ್ಟಾಗ, ನಡುವೆ ಸಿಲುಕಿಕೊಳ್ಳುವ ಹಣ ವಾಪಸ್ ಬರಲು ಕಾಯಬೇಕಾಗಬಹುದು. ಆದರೆ, ಇ-ಪರ್ಸ್‌ನಲ್ಲಿ ಹಾಗಾಗದು. ಡಿಜಿಟಲ್ ರೂಪಾಯಿ ವಹಿವಾಟು ಕ್ಷಿಪ್ರವಾಗಿ ಆಗುತ್ತದೆ. ಥರ್ಡ್ ಪಾರ್ಟಿ ಆ್ಯಪ್‌ಗಳು ಬೇಕಾಗಿರುವುದಿಲ್ಲ, ನಮ್ಮದೇ ಬ್ಯಾಂಕಿನ ಆ್ಯಪ್‌ಗಳ ಬಳಸಿದರೆ ಸಾಕಾಗುತ್ತದೆ. ಹಣ ತುಂಬುವುದು ಕೂಡ ತಕ್ಷಣದಲ್ಲೇ ಆಗುತ್ತದೆ. ಮುಂದಿನ ದಿನಗಳಲ್ಲಿ, ಇಂಟರ್‌ನೆಟ್ ಸೌಕರ್ಯದ ಅಗತ್ಯವಿಲ್ಲದೆಯೇ ಇ-ರೂಪಾಯಿ ಬಳಕೆಗೆ ಅವಕಾಶ ಮಾಡಿಕೊಡುವ ಬಗ್ಗೆ ತಂತ್ರಜ್ಞಾನದ ಅಭಿವೃದ್ಧಿ ಆಗುತ್ತಿದೆ. ಇದಕ್ಕೆ ಆಯಾ ಬ್ಯಾಂಕ್ ಖಾತೆಗೆ ಲಿಂಕ್ ಆಗಿರುವ ಫೋನ್ ನಂಬರ್ ಸಾಕಾಗುತ್ತದೆ. ಈ ರೀತಿಯ ಆಫ್ ಲೈನ್ ಬಳಕೆ ವ್ಯವಸ್ಥೆಯು ಕಾರ್ಯರೂಪಕ್ಕೆ ಬಂದರೆ ವಿಶೇಷವಾಗಿ ಗ್ರಾಮೀಣ ಹಾಗೂ ಇಂಟರ್‌ನೆಟ್ ತಲುಪದಿರುವ ಊರುಗಳಿಗೆ ವರದಾನವಾಗಲಿದೆ. ಜೊತೆಗೆ, ಶೀಘ್ರದಲ್ಲೇ ಅಂತರರಾಷ್ಟ್ರೀಯ ಮಟ್ಟದ ಪಾವತಿಗೂ ಇ-ರುಪೀ ಅವಕಾಶ ನೀಡಲಿದೆ.

### ಎಷ್ಟು ವಹಿವಾಟು ನಡೆಸಬಹುದು?

ಸದ್ಯಕ್ಕೆ ನಮ್ಮ ಡಿಜಿಟಲ್ ಪರ್ಸ್‌ನಲ್ಲಿ ಗರಿಷ್ಠ ರೂ.1 ಲಕ್ಷ ಮಾತ್ರ ಇರಿಸಬಹುದು ಹಾಗೂ ದಿನಕ್ಕೆ ರೂ.25,000 ವಹಿವಾಟು ನಡೆಸಬಹುದಾಗಿದೆ.

### ಇ-ರೂಪಾಯಿ ಬಳಕೆ ಎಷ್ಟು ಸುರಕ್ಷಿತ?

ಇದು ಯುಪಿಐ ಆಧಾರಿತವೂ ಅಲ್ಲ, ಬಿಟ್ಕಾಯಿನ್‌ಗಳಂತಹಾ ಕ್ರಿಪ್ಟೋ ಕರೆನ್ಸಿಯೂ ಅಲ್ಲ. ನಮ್ಮಲ್ಲಿರುವ ಹಣವನ್ನು ಆನ್‌ಲೈನ್ ಪರ್ಸ್‌ನಲ್ಲಿ ಇರಿಸಲು ಅತ್ಯಂತ ಸುರಕ್ಷಿತ ಮಾದರಿ ಇದು. ನೇರವಾಗಿ ರಿಸರ್ವ್ ಬ್ಯಾಂಕ್ ಮೇಲ್ವಿಚಾರಣೆಯಲ್ಲೇ ಇರುತ್ತದೆ. ನಮ್ಮ ಜೇಬಿನಲ್ಲಿರುವ ಪರ್ಸ್ ಕಳೆದುಹೋದರೆ ಸಿಗುವುದು ಕಷ್ಟ. ಆದರೆ, ಇ-ರೂಪಾಯಿ ಆ್ಯಪ್ ಇರುವ ಫೋನ್ ಕಳೆದುಹೋದರೆ ನಮ್ಮ ಡಿಜಿಟಲ್ ಪರ್ಸ್‌ಲ್ಲಿರುವ ಹಣಕ್ಕೇನೂ ಆಗದು. ಬೇರೆ ಸಾಧನದಲ್ಲಿ ಆ್ಯಪ್ ಅಳವಡಿಸಿ ಪುನಃ ಲಾಗಿನ್ ಆಗಬಹುದು. ಇಷ್ಟಲ್ಲದೆ, ಡಿಜಿಟಲ್ ವ್ಯಾಲೆಟ್‌ನಲ್ಲಿರುವ ಡಿಜಿಟಲ್ ರೂಪಾಯಿಯ ನೇರ ಹೊಣೆಗಾರಿಕೆಯು ಕೇಂದ್ರೀಯ ಬ್ಯಾಂಕಿನದೇ ಆಗಿರುತ್ತದೆ, ಹೊರತು ಖಾಸಗಿ ಬ್ಯಾಂಕುಗಳ ಮಧ್ಯವರ್ತಿತನದ ಅಗತ್ಯ ಇರುವುದಿಲ್ಲ.

### ಇ-ರೂಪಾಯಿಯ ಪ್ರಯೋಜನವೇನು?

ವಿಶೇಷತಃ ಸರ್ಕಾರಿ ನಿಧಿಗಳನ್ನು, ಸಬ್ಸಿಡಿ ಮುಂತಾದವುಗಳನ್ನು




ಪಡೆಯಲು ಫಲಾನುಭವಿಗಳಿಗೆ ಇ-ರುಪೀ (ಎಲೆಕ್ಟ್ರಾನಿಕ್ ರೂಪಾಯಿ) ಅನಿವಾರ್ಯವಾಗಬಹುದು. ಬ್ಯಾಂಕ್ ಖಾತೆಯಿಂದ ಒಂದಿಷ್ಟು ಹಣವನ್ನು ಈ ಪರ್ಸ್‌ನಲ್ಲಿಟ್ಟುಕೊಂಡರೆ, ಬೇಕಾದಾಗ ಸಣ್ಣ ಮೊತ್ತವನ್ನು ವ್ಯಯಿಸಲು ಅನುಕೂಲ. ಯುಪಿಐಯಲ್ಲಿ ಆಗಿರುವಂತೆ ಸಣ್ಣಪುಟ್ಟ ವಹಿವಾಟುಗಳು ಬ್ಯಾಂಕ್ ಪಾಸ್ ಬುಕ್‌ನಲ್ಲಿ ದಾಖಲಾಗುವ ಬದಲು, ಈ ಪರ್ಸ್‌ನಲ್ಲೇ ದಾಖಲಾಗುತ್ತವೆ. ಇದಲ್ಲದೆ, ಇ-ರೂಪಾಯಿ ಮೂಲಕ ಮಾಡುವ ವಹಿವಾಟುಗಳಿಗೆ ಯಾವುದೇ ರೀತಿಯ ಶುಲ್ಕಗಳು ಇರುವುದಿಲ್ಲ ಮತ್ತು ಈ ಪರ್ಸ್‌ನಲ್ಲಿ ಕನಿಷ್ಠ ಬ್ಯಾಲೆನ್ಸ್ ಹಣ ಇರಿಸುವ ಅಗತ್ಯವಿರುವುದಿಲ್ಲ. ಭವಿಷ್ಯದಲ್ಲಿ ಅಂತರರಾಷ್ಟ್ರೀಯ ಹಣಕಾಸು ವಹಿವಾಟಿಗೂ ಯಾವುದೇ ವಿನಿಮಯ ಶುಲ್ಕದ ಅಗತ್ಯವಿಲ್ಲದೆ ಇ-ರೂಪಾಯಿಯನ್ನು ಬಳಸುವ ಕುರಿತು ಯೋಜನೆಗಳು ರೂಪುಗೊಳ್ಳುತ್ತಿವೆ. ನೋಟುಗಳಾದರೆ ಹರಿದು ಹೋಗುತ್ತವೆ, ಕೊಳೆಯಾಗಿರುತ್ತವೆ. ಆದರೆ ಇದರಲ್ಲಿರುವ ಹಣಕ್ಕೆ ಆ ಸಮಸ್ಯೆ ಇರುವುದಿಲ್ಲ. ಒಂದು ರೀತಿಯಲ್ಲಿ ಅಕ್ಷರ, ಚಿತ್ರ ಅಥವಾ ಬೇರಾವುದೇ ಫಿಸಿಕಲ್ ದಾಖಲೆಗಳ ಸ್ಥಾನದಲ್ಲಿ ಈಗ ಪಿಡಿಎಫ್ ರೂಪವೇ ಹೆಚ್ಚು ಜನಪ್ರಿಯವಾಗಿರುವಂತೆ, ನಗದು ಹಣದ ಸ್ಥಾನದಲ್ಲಿ ಇ-ರುಪೀ ಬಂದಿದೆ. ಇನ್ನೂ ಶೈಶವಾವಸ್ಥೆಯಲ್ಲಿ ಇರುವ ಹಾಗೂ ನಗದು ರಹಿತ ವಹಿವಾಟಿನತ್ತ ಮುಖ್ಯ ಹೆಜ್ಜೆಯಾಗಿರುವ ಈ ಇ-ರುಪೀ ಪರಿಕಲ್ಪನೆ ಬಗ್ಗೆ ಇನ್ನಷ್ಟೇ ಪ್ರಚಾರವಾಗಬೇಕಿದೆ. ಸದ್ಯಕ್ಕೆ ಸೀಮಿತ ನಗರಗಳಲ್ಲಿ ಮಾತ್ರ ಇದರ ಸೇವೆ ಪ್ರಾಯೋಗಿಕವಾಗಿ ದೊರೆಯುತ್ತಿದೆ. ಆದರೆ ಇದು ಯುಪಿಐಗೆ ಪರ್ಯಾಯವಾಗಬಹುದೇ ಮತ್ತು ಭಾರತದ ಆರ್ಥಿಕತೆಗೆ ಎಷ್ಟರ ಮಟ್ಟಿಗೆ ಬಲ ತುಂಬಬಹುದು ಎಂಬುದನ್ನು ಕಾದು ನೋಡಬೇಕಿದೆ.

# 2026ರಲ್ಲಿ ಕರ್ನಾಟಕದ ಆರ್ಥಿಕತೆ : ಅಭಿವೃದ್ಧಿಯ ಹೊಸ ಎತ್ತರದತ್ತ ದಿಟ್ಟ ಹೆಜ್ಜೆ

ಪ್ರಸಕ್ತ ಆರ್ಥಿಕ ವರ್ಷದಲ್ಲಿ ರಾಜ್ಯದ ತಲಾ ಆದಾಯವು ರೂ.4,33,326 ಕ್ಕೆ ತಲುಪಿದ್ದು, ಇದು ರಾಷ್ಟ್ರೀಯ ತಲಾ ಆದಾಯಕ್ಕಿಂತ ಶೇ. 97 ರಷ್ಟು ಹೆಚ್ಚಾಗಿದೆ. 2026ರಲ್ಲಿ ಕರ್ನಾಟಕ ರಾಜ್ಯದ ಆರ್ಥಿಕತೆಯು ದೇಶದ ಪ್ರಮುಖ ಬೆಳವಣಿಗೆಯ ಮಾದರಿಯಾಗಿ ಹೊರಹೊಮ್ಮಿದೆ. ಕೃಷಿ, ಕೈಗಾರಿಕೆ, ಮಾಹಿತಿ ತಂತ್ರಜ್ಞಾನ, ಸೇವಾ ವಲಯ, ಮೂಲಸೌಕರ್ಯ, ಹೂಡಿಕೆ ಹಾಗೂ ಉದ್ಯೋಗ ಸೃಷ್ಟಿ ಸೇರಿದಂತೆ ಬಹುತೇಕ ಎಲ್ಲಾ ಕ್ಷೇತ್ರಗಳಲ್ಲಿ ರಾಜ್ಯವು ಗಮನಾರ್ಹ ಸಾಧನೆ ಮಾಡಿದೆ. ರಾಜ್ಯ ಸರ್ಕಾರದ ದೂರದೃಷ್ಟಿಯ ಯೋಜನೆಗಳು, ಹೂಡಿಕೆ ಸ್ನೇಹಿ ನೀತಿಗಳು ಹಾಗೂ ಡಿಜಿಟಲ್ ಆಡಳಿತದ ಪರಿಣಾಮವಾಗಿ ಕರ್ನಾಟಕವು ದೇಶದ ವೇಗವಾಗಿ ಬೆಳೆಯುತ್ತಿರುವ ರಾಜ್ಯಗಳ ಪೈಕಿ ತನ್ನ ಸ್ಥಾನವನ್ನು ಮತ್ತಷ್ಟು ಬಲಪಡಿಸಿಕೊಂಡಿದೆ. 2025–26ರಲ್ಲಿ ರಾಜ್ಯದ ನೈಜ ಒಟ್ಟು ರಾಜ್ಯ ದೇಶೀಯ ಉತ್ಪನ್ನ (GSDP) ಬೆಳವಣಿಗೆ ದರವು ಸುಮಾರು 8.1 ಶೇಕಡಾ ದಾಖಲಾಗಿದ್ದು, ಇದೇ ಅವಧಿಯಲ್ಲಿ ದೇಶದ ಸರಾಸರಿ ಬೆಳವಣಿಗೆ ದರವಾದ 7.4 ಶೇಕಡಕ್ಕಿಂತ ಹೆಚ್ಚಾಗಿದೆ.




**ಮುಖ್ಯ ಮುಖ್ಯಾಂಶಗಳು:**

- **ತಲಾ ಆದಾಯ ಏರಿಕೆ :** 2025–26ನೇ ಸಾಲಿನ ಆರ್ಥಿಕ ಸಮೀಕ್ಷೆಯ ಪ್ರಕಾರ, ರಾಜ್ಯದ ತಲಾ ಆದಾಯವು ಹಿಂದಿನ ವರ್ಷದ ರೂ. 3,86,156 ರಿಂದ ಶೇ.12.2 ರಷ್ಟು ಗಣನೀಯವಾಗಿ ಹೆಚ್ಚಳವಾಗಿದೆ.
- **ವಿಶ್ವಬ್ಯಾಂಕ್ ಮಾನದಂಡ :** ಕರ್ನಾಟಕವು ವಿಶ್ವಬ್ಯಾಂಕಿನ ಮೇಲ್ಮಧ್ಯಮ ಆದಾಯದ ಮಿತಿಯನ್ನು ದಾಟಿದ್ದು, ಇದರ ತಲಾ ಆದಾಯವು ಸರಿಸುಮಾರು 5,579 ಡಾಲರ್‌ನಷ್ಟಿದೆ. ಈ ಮೈಲಿಗಲ್ಲನ್ನು ರಾಜ್ಯ ಸರ್ಕಾರವು ಹೆಮ್ಮೆಯ ಸಾಧನೆ ಎಂದು ಬಣ್ಣಿಸಿದೆ.
- **ರಾಷ್ಟ್ರೀಯ ಸರಾಸರಿಗಿಂತ ಹೆಚ್ಚು :** ಕರ್ನಾಟಕದ ತಲಾ ಆದಾಯವು ರೂ.4,33,326 ಆಗಿದ್ದು, ಇದು ಭಾರತದ ತಲಾ ಆದಾಯವಾದ ರೂ.2,19,575 ಕ್ಕಿಂತ ಅತ್ಯಂತ ಹೆಚ್ಚಿನ ಮಟ್ಟದಲ್ಲಿದೆ.
- **ಪ್ರಾದೇಶಿಕ ಅಸಮಾನತೆ :** ರಾಜ್ಯದಲ್ಲಿ ಆದಾಯದ ಹೆಚ್ಚಳ ಕಂಡುಬಂದಿದ್ದರೂ, ಪ್ರಾದೇಶಿಕ ವ್ಯತ್ಯಾಸಗಳು ಇವೆ. ಉದಾಹರಣೆಗೆ, ಬೆಂಗಳೂರು ನಗರ ಜಿಲ್ಲೆಯ ತಲಾ ಆದಾಯವು ಗರಿಷ್ಠ ಮಟ್ಟದಲ್ಲಿದ್ದರೆ, ಕಲ್ಬುರ್ಗಿ ಜಿಲ್ಲೆಯ ತಲಾ ಆದಾಯವು ತೀರಾ ಕೆಳಮಟ್ಟದಲ್ಲಿದೆ.

ರಾಜ್ಯದ ಆರ್ಥಿಕತೆಯಲ್ಲಿ ಸೇವಾ ವಲಯವು ಪ್ರಮುಖ ಪಾತ್ರವಹಿಸುತ್ತಿದ್ದು, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ಹಣಕಾಸು ಸೇವೆಗಳು, ಸ್ಟಾರ್ಟ್‌ಅಪ್‌ಗಳು ಹಾಗೂ ಜಾಗತಿಕ ಸಾಮರ್ಥ್ಯ ಕೇಂದ್ರಗಳು (GCCs) ಕರ್ನಾಟಕದ ಅಭಿವೃದ್ಧಿಗೆ ಹೊಸ ಆಯಾಮವನ್ನು ನೀಡಿವೆ. ಬೆಂಗಳೂರು ವಿಶ್ವದ ಪ್ರಮುಖ ತಂತ್ರಜ್ಞಾನ ಕೇಂದ್ರವಾಗಿ ತನ್ನ ಸ್ಥಾನವನ್ನು ಉಳಿಸಿಕೊಂಡಿರುವುದರ ಜೊತೆಗೆ ಮೈಸೂರು, ಹುಬ್ಬಳ್ಳಿ–ಧಾರವಾಡ, ಮಂಗಳೂರು, ಬೆಳಗಾವಿ ಹಾಗೂ ಕಲಬುರಗಿ ನಗರಗಳಲ್ಲಿಯೂ ಕೈಗಾರಿಕೆ ಮತ್ತು ಸೇವಾ ವಲಯಗಳು ವೇಗವಾಗಿ ಬೆಳೆಯುತ್ತಿವೆ. ರಾಜ್ಯ ಸರ್ಕಾರವು ಬೆಂಗಳೂರು ಮೂಲಸೌಕರ್ಯ ಅಭಿವೃದ್ಧಿಗೆ ಸುಮಾರು 1.5 ಲಕ್ಷ ಕೋಟಿ ಹೂಡಿಕೆ ಘೋಷಿಸಿರುವುದರೊಂದಿಗೆ ದ್ವಿತೀಯ ಮತ್ತು ತೃತೀಯ ಹಂತದ ನಗರಗಳನ್ನು ಹೊಸ ಬೆಳವಣಿಗೆಯ ಕೇಂದ್ರಗಳನ್ನಾಗಿ ರೂಪಿಸುವ ಗುರಿ ಹೊಂದಿದೆ. ಕೃಷಿ ಕ್ಷೇತ್ರದಲ್ಲಿಯೂ 2026ರಲ್ಲಿ ಉತ್ತಮ ಮುಂಗಾರು, ನೀರಾವರಿ ವಿಸ್ತರಣೆ, ತಂತ್ರಜ್ಞಾನ ಆಧಾರಿತ ಕೃಷಿ ಪದ್ಧತಿಗಳು ಹಾಗೂ ರೈತಪರ ಯೋಜನೆಗಳಿಂದ ಗಮನಾರ್ಹ ಪ್ರಗತಿ ಕಂಡುಬಂದಿದೆ. ಕೃಷಿ ಉತ್ಪಾದನೆ ಹೆಚ್ಚಳದೊಂದಿಗೆ ಕೃಷಿ ಆಧಾರಿತ ಕೈಗಾರಿಕೆಗಳ ಬೆಳವಣಿಗೆ ಗ್ರಾಮೀಣ ಆರ್ಥಿಕತೆಗೆ ಹೊಸ ಚೈತನ್ಯ ನೀಡಿದೆ. ಆಹಾರ ಸಂಸ್ಕರಣೆ, ಹೈನುಗಾರಿಕೆ, ತೋಟಗಾರಿಕೆ ಹಾಗೂ ಮೀನುಗಾರಿಕೆ ಕ್ಷೇತ್ರಗಳಲ್ಲಿಯೂ ಹೆಚ್ಚಿನ ಹೂಡಿಕೆಗಳು ಹರಿದುಬಂದಿವೆ. 2025–26ರಲ್ಲಿ ಕೃಷಿ ಕ್ಷೇತ್ರವು ಸುಮಾರು 9.1 ಶೇಕಡಾ ಬೆಳವಣಿಗೆ ದಾಖಲಿಸಿರುವುದು ರಾಜ್ಯದ ಸಮತೋಲನದ ಅಭಿವೃದ್ಧಿಗೆ ಸಾಕ್ಷಿಯಾಗಿದೆ.

ಕೈಗಾರಿಕಾ ವಲಯದಲ್ಲಿ ಎಲೆಕ್ಟ್ರಾನಿಕ್ಸ್, ಏರೋಸ್ಪೇಸ್, ರಕ್ಷಣಾ ಉತ್ಪಾದನೆ, ಯಂತ್ರೋಪಕರಣಗಳು, ವಾಹನೋದ್ಯಮ ಹಾಗೂ ನವೀಕರಿಸಬಹುದಾದ ಇಂಧನ ಕ್ಷೇತ್ರಗಳು ಹೊಸ ಹೂಡಿಕೆಗಳನ್ನು ಆಕರ್ಷಿಸಿವೆ. "ಮೇಕ್ ಇನ್ ಇಂಡಿಯಾ" ಮತ್ತು ರಾಜ್ಯದ ಕೈಗಾರಿಕಾ ನೀತಿಗಳು ದೇಶೀಯ ಹಾಗೂ ವಿದೇಶಿ ಹೂಡಿಕೆದಾರರಿಗೆ ಅನುಕೂಲಕರ ವಾತಾವರಣವನ್ನು ನಿರ್ಮಿಸಿವೆ. ಇದರ ಪರಿಣಾಮವಾಗಿ ಸಾವಿರಾರು ಹೊಸ ಉದ್ಯೋಗಗಳು ಸೃಷ್ಟಿಯಾಗಿದ್ದು, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳಿಗೂ ಉತ್ತೇಜನ ದೊರೆತಿದೆ.

ರಾಜ್ಯದ ಮೂಲಸೌಕರ್ಯ ಅಭಿವೃದ್ಧಿಯೂ ಆರ್ಥಿಕ ಬೆಳವಣಿಗೆಗೆ ಬಲ ನೀಡಿದೆ. ರಸ್ತೆ, ಮೆಟ್ರೋ, ವಿಮಾನ ನಿಲ್ದಾಣ, ಕೈಗಾರಿಕಾ ಕಾರಿಡಾರ್‌ಗಳು, ಲಾಜಿಸ್ಟಿಕ್ಸ್

13ನೇ ಪುಟಕ್ಕೆ...

## ಪಡೆದ ಸಾಲ ಸಕಾಲಕ್ಕೆ ಮರುಪಾವತಿ ಮಾಡುವುದು ಉತ್ತಮ ಭವಿಷ್ಯಕ್ಕೆ ಹಾದಿ



ಸಹಕಾರ ಬ್ಯಾಂಕುಗಳು ಜನಸಾಮಾನ್ಯರ ಆರ್ಥಿಕ ಅಭಿವೃದ್ಧಿಗೆ ಬಲವಾದ ಆಧಾರಸ್ತಂಭಗಳಾಗಿವೆ. ರೈತರು, ಸಣ್ಣ ವ್ಯಾಪಾರಿಗಳು, ಸ್ವಯಂ ಉದ್ಯೋಗಿಗಳು, ಮಹಿಳಾ ಸ್ವಸಹಾಯ ಸಂಘಗಳು ಹಾಗೂ ಮಧ್ಯಮ ವರ್ಗದ ಕುಟುಂಬಗಳಿಗೆ ಕಡಿಮೆ ಬಡ್ಡಿದರದಲ್ಲಿ ಸಾಲ ಸೌಲಭ್ಯ ಒದಗಿಸುವ ಮೂಲಕ ಸಹಕಾರ ಬ್ಯಾಂಕುಗಳು ಸಮಾಜದ ಆರ್ಥಿಕ ಪ್ರಗತಿಗೆ ಮಹತ್ತರ ಕೊಡುಗೆ ನೀಡುತ್ತಿವೆ. ಆದರೆ ಈ ವ್ಯವಸ್ಥೆಯ ಯಶಸ್ಸು ಸಾಲ ಪಡೆಯುವುದರಲ್ಲಿ ಮಾತ್ರವಲ್ಲ, ಅದನ್ನು ನಿಗದಿತ ಸಮಯಕ್ಕೆ ಮರುಪಾವತಿಸುವ ಜವಾಬ್ದಾರಿಯಲ್ಲಿಯೂ ಇದೆ.

ಬ್ಯಾಂಕಿನಿಂದ ಸಾಲವು ಕೇವಲ ಹಣವಲ್ಲ; ಅದು ನಂಬಿಕೆ ಮತ್ತು ಜವಾಬ್ದಾರಿಯ ಸಂಕೇತವಾಗಿದೆ. ಬ್ಯಾಂಕಿನಿಂದ ಪಡೆದ ಸಾಲವನ್ನು ಸರಿಯಾದ ಉದ್ದೇಶಕ್ಕೆ ಬಳಸಿಕೊಂಡು, ಅದರ ಮೂಲಕ ಆದಾಯವನ್ನು ಹೆಚ್ಚಿಸಿಕೊಂಡು, ನಿಗದಿತ ಕಂತುಗಳನ್ನು ಸಮಯಕ್ಕೆ ಪಾವತಿಸುವುದು ಪ್ರತಿಯೊಬ್ಬ ಸಾಲಗಾರನ ಕರ್ತವ್ಯವಾಗಿದೆ. ಸಮಯಕ್ಕೆ ಸರಿಯಾಗಿ ಸಾಲ ಮರುಪಾವತಿಸಿದರೆ ಹೆಚ್ಚುವರಿ ಬಡ್ಡಿಯ ಹೊರೆ ತಪ್ಪುವುದಲ್ಲದೆ, ಉತ್ತಮ ಸಾಲ ಇತಿಹಾಸವೂ ನಿರ್ಮಾಣವಾಗುತ್ತದೆ. ಇದರಿಂದ ಭವಿಷ್ಯದಲ್ಲಿ ಹೆಚ್ಚಿನ ಮೊತ್ತದ ಸಾಲವನ್ನು ಸುಲಭವಾಗಿ ಪಡೆಯುವ ಅವಕಾಶ ದೊರೆಯುತ್ತದೆ.

ಇತ್ತೀಚಿನ ದಿನಗಳಲ್ಲಿ ಬ್ಯಾಂಕುಗಳು ಸಾಲಗಾರರ ಮರುಪಾವತಿ ದಾಖಲೆಯನ್ನು ಆಧರಿಸಿ ಅವರ ವಿಶ್ವಾಸಾರ್ಹತೆಯನ್ನು ಮೌಲ್ಯಮಾಪನ ಮಾಡುತ್ತಿವೆ. ಸಮಯಕ್ಕೆ ಸಾಲ ತೀರಿಸುವವರ ಬಗ್ಗೆ ಬ್ಯಾಂಕುಗಳಿಗೆ ಹೆಚ್ಚಿನ ವಿಶ್ವಾಸ ಮೂಡುತ್ತದೆ. ಅಂತಹ ಗ್ರಾಹಕರಿಗೆ ಹೊಸ ಸಾಲ, ವಾಹನ ಸಾಲ, ಗೃಹ ಸಾಲ ಅಥವಾ ವ್ಯವಹಾರ ವಿಸ್ತರಣೆಗೆ ಅಗತ್ಯವಿರುವ ಆರ್ಥಿಕ ನೆರವು ಸುಲಭವಾಗಿ ದೊರೆಯುತ್ತದೆ. ಇದರಿಂದ ಅವರ ಆರ್ಥಿಕ ಬೆಳವಣಿಗೆಗೆ ಹೊಸ ಅವಕಾಶಗಳು ತೆರೆದುಕೊಳ್ಳುತ್ತವೆ.

ಇನ್ನೊಂದೆಡೆ, ಸಾಲವನ್ನು ನಿರ್ಲಕ್ಷಿಸಿ ಕಂತುಗಳನ್ನು ವಿಳಂಬ ಮಾಡಿದರೆ ಬಡ್ಡಿ, ಹೆಚ್ಚಾಗುತ್ತದೆ, ದಂಡ ವಿಧಿಸಲಾಗುತ್ತದೆ ಹಾಗೂ ಸಾಲಗಾರನ ವಿಶ್ವಾಸಾರ್ಹತೆ ಕುಸಿಯುತ್ತದೆ. ಇದರ ಪರಿಣಾಮವಾಗಿ ಮುಂದಿನ ದಿನಗಳಲ್ಲಿ ಹೊಸ ಸಾಲ ಪಡೆಯುವುದು ಕಷ್ಟವಾಗಬಹುದು. ಕೆಲವು ಸಂದರ್ಭಗಳಲ್ಲಿ ಕಾನೂನು ಕ್ರಮಗಳಿಗೂ ಒಳಗಾಗುವ ಸಾಧ್ಯತೆ ಇರುತ್ತದೆ. ಹೀಗಾಗಿ ಸಾಲವನ್ನು ಜವಾಬ್ದಾರಿಯಿಂದ ಬಳಸಿ ಆದಾಯ ಗಳಿಸಿ, ಸಮಯಕ್ಕೆ ಸರಿಯಾಗಿ ಮರು ಪಾವತಿಸಿ, ಬ್ಯಾಂಕಿನ ವಿಶ್ವಾಸ ಗಳಿಸಿ. ಸಹಕಾರ ಬ್ಯಾಂಕುಗಳ ಆರ್ಥಿಕ ಆರೋಗ್ಯವು ಸದಸ್ಯರು ಮತ್ತು ಸಾಲಗಾರರ ಸಮಯೋಚಿತ ಮರುಪಾವತಿಯ ಮೇಲೆ ಅವಲಂಬಿತವಾಗಿದೆ. ಒಬ್ಬ ಸದಸ್ಯ ಸಮಯಕ್ಕೆ ಸಾಲ ತೀರಿಸಿದಾಗ, ಅದೇ ಹಣ ಮತ್ತೊಬ್ಬ ರೈತ, ಯುವ ಉದ್ಯಮಿ, ಮಹಿಳಾ ಉದ್ಯಮಿ ಅಥವಾ ವಿದ್ಯಾರ್ಥಿಯ ಕನಸುಗಳಿಗೆ ನೆರವಾಗುತ್ತದೆ. ಹೀಗಾಗಿ ಸಮಯಕ್ಕೆ ಸಾಲ ಮರುಪಾವತಿ ಮಾಡುವುದು ವೈಯಕ್ತಿಕ ಜವಾಬ್ದಾರಿಯಷ್ಟೇ ಅಲ್ಲ, ಸಹಕಾರ ಚಳವಳಿಯನ್ನು ಬಲಪಡಿಸುವ ಸಾಮಾಜಿಕ ಕರ್ತವ್ಯವೂ ಆಗಿದೆ.

ಗ್ರಾಹಕರು ಸಹಕಾರ ಬ್ಯಾಂಕುಗಳ ಮೇಲಿನ ವಿಶ್ವಾಸವನ್ನು ಉಳಿಸಿಕೊಂಡು, ಆರ್ಥಿಕ ಶಿಸ್ತನ್ನು ಪಾಲಿಸಿ, ಸಾಲವನ್ನು ಸಮಯಕ್ಕೆ ಸರಿಯಾಗಿ ಮರುಪಾವತಿ ಮಾಡುವ ಮೂಲಕ ವೈಯಕ್ತಿಕ ಪ್ರಗತಿಯ ಜೊತೆಗೆ ಸಮಾಜದ ಸಮೃದ್ಧಿಗೂ ಪ್ರತಿಯೊಬ್ಬರೂ ಕೈಜೋಡಿಸಬೇಕಿದೆ.

...12ನೇ ಪುಟದಿಂದ

ಪಾರ್ಕ್‌ಗಳು ಹಾಗೂ ಡಿಜಿಟಲ್ ಸಂಪರ್ಕ ವ್ಯವಸ್ಥೆಗಳ ವಿಸ್ತರಣೆಯಿಂದ ವ್ಯಾಪಾರ ಚಟುವಟಿಕೆಗಳು ವೇಗ ಪಡೆದಿವೆ. ಗ್ರಾಮೀಣ ಪ್ರದೇಶಗಳಲ್ಲಿಯೂ ಸಂಪರ್ಕ ವ್ಯವಸ್ಥೆ, ಕುಡಿಯುವ ನೀರು ಹಾಗೂ ವಿದ್ಯುತ್ ಸೌಲಭ್ಯಗಳ ಸುಧಾರಣೆಯಿಂದ ಉತ್ಪಾದಕತೆ ಹೆಚ್ಚಾಗಿದೆ.

ಉದ್ಯೋಗ ಸೃಷ್ಟಿ, ಕೌಶಲ್ಯಾಭಿವೃದ್ಧಿ ಹಾಗೂ ಯುವಜನರಿಗೆ ಉದ್ಯಮಶೀಲತೆಯನ್ನು ಉತ್ತೇಜಿಸುವ ಕಾರ್ಯಕ್ರಮಗಳು ರಾಜ್ಯದ ಆರ್ಥಿಕ ಪ್ರಗತಿಗೆ ಮತ್ತಷ್ಟು ಬಲ ತುಂಬಿವೆ. ಸ್ಟಾರ್ಟ್‌ಅಪ್ ಪರಿಸರದಲ್ಲಿ ಕರ್ನಾಟಕವು ದೇಶದಲ್ಲೇ ಮುಂಚೂಣಿಯಲ್ಲಿದ್ದು, ನವೋದ್ಯಮಗಳಿಗೆ ಹೂಡಿಕೆ ಮತ್ತು ಸಂಶೋಧನಾ ಅವಕಾಶಗಳು ಹೆಚ್ಚಾಗಿವೆ. ಮಹಿಳಾ ಉದ್ಯಮಿಗಳು, ಸಹಕಾರ ಸಂಸ್ಥೆಗಳು ಹಾಗೂ ಗ್ರಾಮೀಣ ಸ್ವ-ಉದ್ಯೋಗ ಯೋಜನೆಗಳಿಗೂ ಹೆಚ್ಚಿನ ಪ್ರೋತ್ಸಾಹ ದೊರೆತಿದೆ.

ರಾಜ್ಯದ ತಲಾ ಆದಾಯದಲ್ಲಿಯೂ ಗಮನಾರ್ಹ ಏರಿಕೆ ಕಂಡುಬಂದಿದೆ. 2025-26ರಲ್ಲಿ ತಲಾ GSDP ಸುಮಾರು ರೂ.4.77 ಲಕ್ಷಕ್ಕೆ ಏರಿಕೆಯಾಗಿದೆ ಎಂದು ಅಂದಾಜಿಸಲಾಗಿದ್ದು, ಇದು ರಾಷ್ಟ್ರೀಯ ಸರಾಸರಿಗಿಂತ ಗಮನಾರ್ಹವಾಗಿ ಹೆಚ್ಚಾಗಿದೆ.

ಒಟ್ಟಾರೆಯಾಗಿ, 2026ರಲ್ಲಿ ಕರ್ನಾಟಕದ ಆರ್ಥಿಕತೆ ವೈವಿಧ್ಯಮಯ ಬೆಳವಣಿಗೆ, ಬಲಿಷ್ಠ ಕೈಗಾರಿಕಾ ನೆಲೆ, ಜಾಗತಿಕ ಮಟ್ಟದ ತಂತ್ರಜ್ಞಾನ ವಲಯ, ಕೃಷಿ ಅಭಿವೃದ್ಧಿ ಹಾಗೂ ಸುಸ್ಥಿರ ಮೂಲಸೌಕರ್ಯ ಹೂಡಿಕೆಗಳ ಆಧಾರದ ಮೇಲೆ ಹೊಸ ಎತ್ತರ ತಲುಪಿದೆ. ಇದೇ ಅಭಿವೃದ್ಧಿಯ ವೇಗ ಮುಂದುವರಿದರೆ ಕರ್ನಾಟಕವು ದೇಶದ ಅತ್ಯಂತ ಸಮೃದ್ಧ ಮತ್ತು ಹೂಡಿಕೆ ಸ್ನೇಹಿ ರಾಜ್ಯವಾಗಿ ತನ್ನ ಸ್ಥಾನವನ್ನು ಇನ್ನಷ್ಟು ಗಟ್ಟಿಗೊಳಿಸುವುದರಲ್ಲಿ ಸಂದೇಹವಿಲ್ಲ.

# ದಿ ಮೈಸೂರು ಮರ್ಚೆಂಟ್ಸ್ ಕೋ-ಆಪರೇಟಿವ್ ಬ್ಯಾಂಕ್ ಲಿ., ಮೈಸೂರು - ಯಶೋಗಾಥೆ



ಶ್ರೀ ಸಿ.ವಿ. ಸೋಮಶೇಖರ
ಅಧ್ಯಕ್ಷರು



ಶ್ರೀ ಎಂ.ಎನ್. ಮಹೇಶ
ಉಪಾಧ್ಯಕ್ಷರು



ಶ್ರೀ ಬಿ.ಪಿ. ಶಿವಕುಮಾರ
ಮುಖ್ಯಕಾರ್ಯನಿರ್ವಹಣಾಧಿಕಾರಿ

ಅಗತ್ಯ ಆಹಾರ ವಸ್ತುಗಳಿಗೆ ಕ್ಷಾಮ, ಕಾಳಸಂತೆ ಮಾರಾಟ, ಖಾಸಗಿ ಲೇವಾದೇವಿಯವರ ಹಿಡಿತದಿಂದ ವರ್ತಕರಿಗೆ ಆಗುತ್ತಿದ್ದ ತೊಂದರೆಗಳನ್ನು ತಪ್ಪಿಸಲು ಸಾಮಾಜಿಕ ಕಳಕಳಿ ಹಾಗೂ ಸೇವಾ ಮನೋಭಾವವುಳ್ಳ ಕೆಲವು ವರ್ತಕರು ದಿವಂಗತ ರಾಗಿಮಂಡಿ ಚೌಡಯ್ಯನವರ ಮುಂದಾಳತ್ವದಲ್ಲಿ ಇತರ ಸಮಾನ ಮನಸ್ಕ ವರ್ತಕರುಗಳಾದ ಪಿ.ಎನ್. ಸುಬ್ಬರಾಯಪ್ಪ, ಎ. ಚಿನ್ನಸ್ವಾಮಿ ಮೊದಲಿಯಾರ್, ಬಿ.ರಾಮಣ್ಣ, ಎಂ.ಜಿ. ಪುಟ್ಟಸ್ವಾಮಯ್ಯ, ಎಸ್.ಎಂ. ಅಮೀರ್‌ಜಾನ್, ಎಲ್. ರಾಮಯ್ಯ ಮುಂತಾದವರು ತಮ್ಮದೇ ಆದ ಸಹಕಾರ ಸಂಘವನ್ನು ಸ್ಥಾಪಿಸಿಕೊಂಡು ವರ್ತಕರಿಗೆ ಅನುಕೂಲ ಮಾಡಿಕೊಡಲು ಚಿಂತಿಸಿ ದಿ ಮೈಸೂರು ಮರ್ಚೆಂಟ್ಸ್ ಕೋ-ಆಪರೇಟಿವ್ ಸೊಸೈಟಿ ಲಿ., ಅನ್ನು ದಿನಾಂಕ : 02.07.1959 ರಂದು ನೋಂದಣಿ ಮಾಡಿಸಿ ಕೇವಲ 131 ಸದಸ್ಯರಿಂದ ರೂ.56429.00 ಗಳ ಪಾಲು ಬಂಡವಾಳ ಹಾಗೂ ರೂ.7000 ಠೇವಣಿಯೊಂದಿಗೆ ಪ್ರಾರಂಭಿಸಿತು. ನಂತರ 1962ರಲ್ಲಿ ಬ್ಯಾಂಕ್ ಆಗಿ ಪರಿವರ್ತನೆಗೊಂಡು ಯಶಸ್ವಿಯಾಗಿ ಕಾರ್ಯಾಚರಣೆ ಮಾಡಿಕೊಂಡು ಬರುತ್ತಿರುತ್ತದೆ. ಬ್ಯಾಂಕು ತನ್ನ ಸ್ವಂತ ಕಟ್ಟಡವನ್ನು ಜಗನ್ಮೋಹನ ಅರಮನೆ ರಸ್ತೆಯಲ್ಲಿ ಹಾಗೂ ಬಂಡಿಪಾಳ್ಯದಲ್ಲಿ ಶಾಖೆಯನ್ನು ಹೊಂದಿರುತ್ತದೆ.

ಬ್ಯಾಂಕು ಸಾಮಾಜಿಕ ಕಳಕಳಿಯನ್ನು ಸಹ ಹೊಂದಿದ್ದು, ಗುಜರಾತ್ ಭೂಕಂಪ ಸಂತ್ರಸ್ತರಿಗೆ, ಅಸ್ಸಾಂ, ಉತ್ತರ ಕರ್ನಾಟಕ, ಮಡಿಕೇರಿ ನೆರೆ ಹಾವಳಿಯಲ್ಲಿ ನೊಂದವರಿಗು ಕೂಡ ಸಹಾಯ ಹಸ್ತ ನೀಡಿದೆ. ಬ್ಯಾಂಕು ಅನೇಕ ಬಾರಿ ಉತ್ತಮ ಪಟ್ಟಣ ಸಹಕಾರ ಬ್ಯಾಂಕ್ ಎಂದು ಗೌರವಕ್ಕೆ ಪಾತ್ರವಾಗಿರುತ್ತದೆ. ಬ್ಯಾಂಕು ತನ್ನ 50ನೇ ವರ್ಷದ ಸುವರ್ಣ ಮಹೋತ್ಸವವನ್ನು ವಿಜೃಂಭಣೆಯಿಂದ ದಿನಾಂಕ : 04.10.2009 ರಂದು ಆಚರಿಸಿಕೊಂಡು 70ನೇ ವರ್ಷದ ಅಮೃತಮಹೋತ್ಸವ ಆಚರಣೆಯತ್ತ ಮುನ್ನಡೆಯುತ್ತಿದೆ. ಬ್ಯಾಂಕು ಕೇಂದ್ರ ಕಛೇರಿ-ಶಾಖೆಯನ್ನು ನಗರದ ಜಗನ್‌ಮೋಹನ ಶಾಖೆಯಲ್ಲಿ ಹೊಂದಿದ್ದು, ಶಾಖೆಗಳನ್ನು ಎ.ಪಿ.ಎಂ.ಸಿ. ಪ್ರಾಂಗಣದ ಬಂಡಿಪಾಳ್ಯದಲ್ಲಿ ಹಾಗೂ ಹೆಬ್ಬಾಳನಲ್ಲಿ ಹೊಂದಿರುತ್ತದೆ. ಪ್ರತಿ ವರ್ಷವು 15 ಜನ ಬ್ಯಾಂಕಿನ ಹಿರಿಯ ಸದಸ್ಯರಿಗೆ ಸರ್ವಸದಸ್ಯರ ಸಭೆಯಲ್ಲಿ ಸನ್ಮಾನಿಸಲಾಗುತ್ತಿದೆ. ಬ್ಯಾಂಕಿನ ಸದಸ್ಯರ ಮಕ್ಕಳ ಪ್ರತಿಭೆ ಪುರಸ್ಕರಿಸಲು ಪ್ರತಿಭಾ ಪುರಸ್ಕಾರ ಕಾರ್ಯಕ್ರಮವನ್ನು ಕಳೆದ 25 ವರ್ಷಗಳಿಂದಲು ನಡೆಸಿಕೊಂಡು ಬರುತ್ತಿರುತ್ತದೆ. ಸದಸ್ಯರುಗಳಿಗೆ ವೈದ್ಯಕೀಯ ಧನಸಹಾಯವನ್ನು ನೀಡಲಾಗುತ್ತಿದ್ದು, ಮೃತರಾದ ಸದಸ್ಯರ ನಾಮಿನಿಗೆ 20,000ರೂ. ಗಳ ಧನಸಹಾಯವನ್ನು ನೀಡುತ್ತಿದೆ. ಬ್ಯಾಂಕಿನ ಸೇವೆಯನ್ನು ಕೋರ್ ಬ್ಯಾಂಕಿಂಗ್ ಸೇವೆಗೆ ಒಳಪಡಿಸಿ, ಸದಸ್ಯರಿಗೆ ಹಾಗೂ ಗ್ರಾಹಕರಿಗೆ ಉತ್ತಮ ಸೇವೆಯನ್ನು ಒದಗಿಸುತ್ತಾ




| ದಿನಾಂಕ:31.3.2026ರ ಅಂತ್ಯಕ್ಕೆ ಬ್ಯಾಂಕಿನ ಅಂಕಿ-ಅಂಶಗಳು | |
|---|---|
| ನಿಯಮಿತ ಸದಸ್ಯರು | 6930 (ಅಸೋಸಿಯೇಟ್ 415) |
| ಷೇರು ಬಂಡವಾಳ | ರೂ. 6.25 ಕೋಟಿ |
| ಮೀಸಲು ನಿಧಿ | ರೂ. 40.36 ಕೋಟಿ |
| ಇತರೆ ಮೀಸಲು | ರೂ. 51.20 ಕೋಟಿ |
| ಠೇವಣಿಗಳು | ರೂ. 464.00 ಕೋಟಿ |
| ಮುಂಗಡಗಳು | ರೂ. 324.07 ಕೋಟಿ |
| ಹೂಡಿಕೆ | ರೂ.235.40 ಕೋಟಿ (ರೂ.148.39 ಕೋಟಿ ಸರ್ಕಾರಿ ಹೂಡಿಕೆ) |
| ಒಟ್ಟು ವಹಿವಾಟು | ರೂ. 788.07 ಕೋಟಿ |
| ಪ್ರತಿ ಉದ್ಯೋಗಿಯ ವ್ಯವಹಾರ | ರೂ. 30.64 ಕೋಟಿ |
| ನಿವ್ವಳ ಲಾಭ | ರೂ. 7.96 ಕೋಟಿ |
| ಉದ್ಯೋಗಿಗಳ ಸಂಖ್ಯೆ | 26 |
| ಒಟ್ಟು ಎನ್‌ಪಿಎ | 2.72% |
| ನಿವ್ವಳ ಎನ್‌ಪಿಎ | 0.00% |
| ಬಿಡಿಡಿಆರ್ | ರೂ. 19.07 ಕೋಟಿ |
| ನಿವ್ವಳ ಸ್ವಂತ ನಿಧಿ | ರೂ. 97.82 ಕೋಟಿ |
| ಸಿಆರ್‌ಎಆರ್ | 22.20% |
| ಸಿಡಿ ರೇಷಿಯಾ | 69.84% |

ಬಂದಿರುತ್ತದೆ. ಬ್ಯಾಂಕು ತನ್ನ ಸೇವೆಯನ್ನು ವಿಸ್ತರಿಸಲು ಗ್ರಾಹಕರಿಗೆ ನೆಟ್ ಬ್ಯಾಂಕಿಂಗ್ ವ್ಯವಸ್ಥೆ, ಯು.ಪಿ.ಐ.ವ್ಯವಸ್ಥೆ, ಚೆಕ್ ನಗದೀಕರಣದ ವ್ಯವಸ್ಥೆ, ಆರ್.ಟಿ.ಜಿ.ಎಸ್-ನೆಫ್ಟ್ ಸೌಲಭ್ಯ, ಐಡಿಬಿಐ ಬ್ಯಾಂಕಿನೊಂದಿಗಿನ ಹೊಂದಾಣಿಕೆ ಮೂಲಕ ಡಿ.ಡಿ.ವಿತರಣೆ ಸೌಲಭ್ಯ ನೀಡುತ್ತಾ ಬಂದಿರುತ್ತದೆ. ಕೇವಲ ವಾರ್ಷಿಕ ಶೇ.7.5 ದರದಲ್ಲಿ ಖಾಯಂ ಸದಸ್ಯರ ಮಕ್ಕಳಿಗೆ ಗರಿಷ್ಠ 50 ಲಕ್ಷ ರೂ.ಗಳವರೆವಿಗೂ ಸೂಕ್ತ ಭದ್ರತೆ ಪಡೆದು ವಿದ್ಯಾಭ್ಯಾಸ ಸಾಲವನ್ನು ಒದಗಿಸುತ್ತಾ ಬಂದಿರುತ್ತದೆ. ಪ್ರತಿವರ್ಷವು ಬ್ಯಾಂಕು ಲಾಭಗಳಿಕೆಯತ್ತ ಸಾಗುತ್ತಾ ಬಂದಿದ್ದು, ನಿವ್ವಳ ಎನ್.ಪಿ.ಎ. ಶೂನ್ಯವಾಗಿರುತ್ತದೆ. ಬ್ಯಾಂಕು ಕಳೆದ 20 ವರ್ಷಗಳಿಂದಲು ಸದಸ್ಯರಿಗೆ ಶೇ.25ರ ಲಾಭಾಂಶ ನೀಡುತ್ತಾ ಬಂದಿರುತ್ತದೆ.

# SHRI VIJAY MAHANTESH CO-OP BANK LTD., HUNGUND - 587118

| | |
|---|---|
| R.B.I.L.NO: UBD-KA/549.P<br>Date: 10.09.1986 | Reg-No.22472.<br>Date: 17.10.1961 |

| ಶಾಖೆಗಳು | | | | | |
|---|---|---|---|---|---|
| ಗುಡೂರ ಎಸ್.ಸಿ<br>Ph: (08351) 285072 | ಅಮೀನಗಡ<br>Ph:(08351) 280246 | ಇಲಕಲ್ಲ<br>Ph:(08351) 270203 | ಇಲಕಲ್ಲ ಅಲಂಪೂರ<br>Ph:(08351) 271898 | ಬಾಗಲಕೋಟ<br>Ph:(08354) 222050 | ಕೊಪ್ಪಳ<br>Ph:(08539)221288 |
| ಕಾರಟಗಿ<br>Ph:(08533) 275077 | ಮಹಾಂತನಗರ ಹುನಗುಂದ<br>Ph:(08351) 260505 | ಮುದ್ದೇಬಿಹಾಳ<br>Ph:(08356) 220520 | ಗದಗ<br>Ph:(08372) 237994 | ಲಿಂಗಸುಗೂರ<br>Ph:(08537) 257976 | |

| ಬ್ಯಾಂಕಿನ ಆರ್ಥಿಕ ನೋಟ: 31.03.2026ಕ್ಕೆ ಇದ್ದಂತೆ (ರೂ. ಲಕ್ಷಗಳಲ್ಲಿ) | | | |
|---|---|---|---|
| ವಸೂಲಾದ ಷೇರುಹಣ | 1996.66 | ದುಡಿಯುವ ಬಂಡವಾಳ | 66273.17 |
| ನಿಧಿಗಳು | 4922.26 | ನಿವ್ವಳ ಲಾಭ (31.03.2026) | 135.53 |
| ಠೇವುಗಳು | 58812.05 | ನಿವ್ವಳ ನಿಷ್ಕ್ರೀಯ ಸಾಲಗಳ ಪ್ರಮಾಣ | 16.80% |
| ಸಾಲಗಳು | 37409.56 | | |

**ಠೇವು ವಿಮಾ ಯೋಜನೆಗೆ ಒಳಪಟ್ಟ ಬ್ಯಾಂಕು, ಸೇಫ್ ಡಿಪಾಜಿಟ್ ಲಾಕರುಗಳ ಸೌಲಭ್ಯ ದೊರೆಯುತ್ತದೆ. ಸಂಪೂರ್ಣ ಗಣಕೀಕೃತ ಬ್ಯಾಂಕಿಂಗ್ ಸೇವೆ, ಠೇವಣಿಗಳ ಮೇಲೆ ರಾಷ್ಟ್ರೀಕೃತ ಬ್ಯಾಂಕಿಗಿಂತ ಹೆಚ್ಚಿನ ಬಡ್ಡಿದರಗಳು. NEFT/RTGS ಸೌಲಭ್ಯ ಇರುತ್ತದೆ. ವಿನಯ ಹಾಗೂ ಶೀಘ್ರ ಬ್ಯಾಂಕಿಂಗ್ ಸೇವೆಗೆ ಇಂದೆ ಸಂದರ್ಶಿಸಿರಿ.**

| ನಮ್ಮ ಬ್ಯಾಂಕಿನ ಠೇವಣಿಗಳ ಮೇಲಿನ ಆಕರ್ಷಣೀಯ ಬಡ್ಡಿ ದರಗಳು | | | |
|---|---|---|---|
| ಕ್ರ. ಸಂ. | ಮುದ್ದತಿ ಠೇವುಗಳು (w.e.f: 01.08.2026) | ಸಾಮಾನ್ಯ | ಹಿರಿಯ ನಾಗರಿಕರು |
| 1 | 15 ದಿವಸದಿಂದ 45 ದಿವಸಗಳವರೆಗೆ | 4.50% | 4.50% |
| 2 | 46 ದಿವಸದಿಂದ 90 ದಿವಸಗಳವರೆಗೆ | 5.50% | 5.50% |
| 3 | 91 ದಿವಸದಿಂದ 179 ದಿವಸಗಳವರೆಗೆ | 6.50% | 6.50% |
| 4 | 180 ದಿವಸಗಳಿಂದ 364 ದಿವಸಗಳ ವರೆಗೆ | 7.00% | 7.00% |
| 5 | 1 ವರ್ಷದಿಂದ 3 ವರ್ಷದೊಳಗೆ | 8.00% | 8.50% |
| 6 | 37 ತಿಂಗಳು ಮೇಲ್ಪಟ್ಟು | 8.25% | 8.75% |
| 7 | ಉಳಿತಾಯ ಖಾತೆ (w.e.f:01.06.2020) | 3.50% | 3.50% |
| ಹಿರಿಯ ನಾಗರೀಕರಿಗೆ ಒಂದು ವರ್ಷ ಹಾಗೂ ಮೇಲ್ಪಟ್ಟ ಅವಧಿಗೆ ಸಾಮಾನ್ಯ ಬಡ್ಡಿ ದರಕ್ಕಿಂತ ಶೇ.0.50%ರಷ್ಟು ಬಡ್ಡಿ ಹೆಚ್ಚಿಗೆ ಕೊಡಲಾಗುವುದು. ಶ್ರೀ ವಿಜಯ ಮಹಾಂತೇಶ ಕ್ಯಾಶ್ ಸರ್ಟಿಫೀಕೇಟ ಠೇವಣಿಯಲ್ಲಿ ಹಿರಿಯ ನಾಗರಿಕರು ತೊಡಗಿಸಿದ ಹಣ 8 ವರ್ಷ 3 ತಿಂಗಳಿಗೆ ದುಪ್ಪಟ್ಟು ಆಗುತ್ತದೆ. ಉದಾ: ರೂ. 10000/– ಠೇವಣಿಗೆ 8 ವರ್ಷ 3 ತಿಂಗಳಿಗೆ 20423/– ರೂ. ಆಗುತ್ತದೆ. | | | |

## ನಿರ್ದೇಶಕ ಮಂಡಳಿ

ಶ್ರೀ ಮಹಾಂತೇಶ ಎಮ್. ಅವಾರಿ – ಅಧ್ಯಕ್ಷರು
ಶ್ರೀಮತಿ ಶಕುಂತಲಾ ಎಸ್. ಬೆಲ್ಲದ – ಉಪಾಧ್ಯಕ್ಷರು
ಶ್ರೀ ಮಂಜುನಾಥ ಎನ್. ಆಲೂರ
ಶ್ರೀಮತಿ ಶಕುಂತಲಾ ಎಸ್ ಗಂಜಿಹಾಳ
ಶ್ರೀ ರವಿ ಎಮ್. ಹುಚನೂರ
ಶ್ರೀ ಸೋಮಶೇಖರ ಎಚ್. ಬಲಕುಂದಿ
ಶ್ರೀ ನೀಲಪ್ಪ ಎಸ್. ಮುಕ್ಕಣ್ಣವರ
ಶ್ರೀಮತಿ ಲಕ್ಷೀಬಾಯಿ ಎಮ್. ಮುಕ್ಕಣ್ಣವರ
ಶ್ರೀ ಶಿವಾನಂದ ವ್ಹಿ. ಕಂಠಿ
ಶ್ರೀ ಬಸವರಾಜ ಎಸ್. ಹೊಸೂರ
ಶ್ರೀ ನೀಲಪ್ಪ ಎಫ್. ತಪೇಲಿ
ಶ್ರೀ ತಿಪರಡ್ಡೆಪ್ಪ ಎಮ್. ನಾಗರಾಳ
ಶ್ರೀ ರಾಜಕುಮಾರ ಬಿ. ಬಾದವಾಡಗಿ
ಶ್ರೀ ಶರಣಪ್ಪ ಬ. ಹೊಸೂರ
ಶ್ರೀ ಬಸವರಾಜ ಬಿ. ನಾಡಗೌಡರ
ಶ್ರೀ ತಿರುಪತಿ ಎಚ್. ಕುಷ್ಟಗಿ
ಶ್ರೀಮತಿ ದೀಪಾ ಎಮ್. ಸುಂಕದ
ಶ್ರೀ ದೇವಪ್ಪ ಆರ್. ಡಂಬಳ
ಶ್ರೀ ನೂರಂದಗೌಡ ಎಮ್. ಕಲಗೋಡಿ
ಶ್ರೀ ವಿಕಾಸ ತಿಪಶೆಟ್ಟಿ
ಶ್ರೀ ಸುರೇಶ ಹೆಚ್. ಚಿತ್ತರಗಿ

ಶ್ರೀ ಬಿ.ಆರ್. ರಾಜಾಪೂರ, ಉಪ ಪ್ರಧಾನ ವ್ಯವಸ್ಥಾಪಕರು,
ಶ್ರೀ ವಿಜಯ ಮಹಾಂತೇಶ ಸಹಕಾರಿ, ಬ್ಯಾಂಕ್ ನಿ., ಹುನಗುಂದ.

ಶ್ರೀ ಪಿ.ಎನ್. ಪಾಟೀಲ, ಪ್ರಧಾನ ವ್ಯವಸ್ಥಾಪಕರು,
ಶ್ರೀ ವಿಜಯ ಮಹಾಂತೇಶ ಸಹಕಾರಿ ಬ್ಯಾಂಕ್ ನಿ., ಹುನಗುಂದ.

ಶ್ರೀ ಮಹಾಂತೇಶ ಎಮ್. ಅವಾರಿ, ಅಧ್ಯಕ್ಷರು,
ಶ್ರೀ ವಿಜಯ ಮಹಾಂತೇಶ ಸಹಕಾರಿ
ಬ್ಯಾಂಕ್ ನಿ., ಹುನಗುಂದ

ಸ್ಥಾಪನೆ-1965

# ಶ್ರೀ ವೀರಪುಲಿಕೇಶಿ ಕೋ-ಆಪರೇಟಿವ್ಹ ಬ್ಯಾಂಕ ಲಿ., ಬಾದಾಮಿ

ಸಹಕಾರ ಕ್ಷೇತ್ರದ ಇತಿಹಾಸದಲ್ಲಿ 50 ವರ್ಷಗಳನ್ನು ಪೂರೈಸಿ
ಸುವರ್ಣ ಮಹೋತ್ಸವನ್ನು ಆಚರಿಸಿ ಮುನ್ನಡೆಯುತ್ತಿರುವ ನಿಮ್ಮ ನೆಚ್ಚಿನ ಬ್ಯಾಂಕ

ಠೇವು ವಿಮಾ ಯೋಜನೆಗೆ ಒಳಪಟ್ಟ ಬ್ಯಾಂಕ

## ನಿರ್ದೇಶಕ ಮಂಡಳಿ

| | |
|---|---|
| ಶ್ರೀ ಎಮ್ ಕೆ ಪಟ್ಟಣಶೆಟ್ಟಿ | ಅಧ್ಯಕ್ಷರು |
| ಶ್ರೀ ಎ ಸಿ ಪಟ್ಟಣದ | ನಿರ್ದೇಶಕರು |
| ಶ್ರೀ ಸಿ ಯು ಪಟ್ಟಣದ | ನಿರ್ದೇಶಕರು |
| ಶ್ರೀ ಎಮ್ ಎಸ್ ತೆಗ್ಗಿನಮನಿ | ನಿರ್ದೇಶಕರು |
| ಶ್ರೀ ವಿ ಆರ್ ಪಾಟೀಲ | ನಿರ್ದೇಶಕರು |
| ಶ್ರೀ ಕೆ ಎಮ್ ಪಟ್ಟಣಶೆಟ್ಟಿ | ನಿರ್ದೇಶಕರು |
| ಶ್ರೀ ಎಚ್ ಕೆ ಬೆಳ್ಳಿಗುಂಡಿ | ನಿರ್ದೇಶಕರು |
| ಶ್ರೀಮತಿ ಶಾಂತಾದೇವಿ ಎಮ್ ಪಟ್ಟಣಶೆಟ್ಟಿ | ನಿರ್ದೇಶಕಿಯರು |
| ಶ್ರೀಮತಿ ಎಸ್ ಎಮ್ ಪಟ್ಟಣಶೆಟ್ಟಿ | ನಿರ್ದೇಶಕಿಯರು |
| ಶ್ರೀ ಎಮ್ ಆರ್ ತಳವಾರ | ನಿರ್ದೇಶಕರು |
| ಶ್ರೀ ಎಸ್ ಆರ್ ಪಟ್ಟಣದ | ನಿರ್ದೇಶಕರು |
| ಶ್ರೀ ಎನ್ ಎಮ್ ಟೆಂಗಿನಕಾಯಿ | ನಿರ್ದೇಶಕರು |
| ಶ್ರೀ ಬಿ ವ್ಹಿ ಮೇಟಿ | ನಿರ್ದೇಶಕರು |
